ಪ್ರಸ್ತಾವ

೧೯೮೬ನೇ ಸಾಲಿನ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕಕ್ಕೆ ಸಂಬಂಧಿಸಿದ ಜಂಟಿ ಸಮಿತಿಯು ವರದಿ ಸಲ್ಲಿಸ ಕಾಲಾವಧಿಯಂ ವಿಸ್ತರಣೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಕಂದಾಯ ಮತ್ತು ಯೋಜನ ಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೇ, ಈ ಕೆಳಕಂಡ ಪ್ರಸ್ತಾವನ್ನು ಮಂಡಿಸಲಂ ತಮ್ಮ ಅನುಮತಿಯನ್ನು ಕೋರುತ್ತೇನೆ. '೧೯೮೬ನೇ ಸಾಲಿನ ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕಕ್ಕೆ ಸಂಬಂಧಿಸಿದಂತೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿಯು ವರದಿಯನ್ನು ಒಪ್ಪಿಸಲು ೧೯೮೮ನೇ ಮೇ ತಿಂಗಳ ಅಂತ್ಯದವರೆಗೆ ಕಾಲಾವಧಿಯನ್ನು ವಿಸ್ತರಿಸುವುದು''

ಅಧ್ಯಕ್ಷರು.—ಪ್ರಸ್ತಾವನೆಯನ್ನು ಮಂಡಿಸಲಾಗಿದೆ. ಪ್ರಸ್ತಾವ ಏನೆಂದರೆ, ''೧೯೮೬ನೇ ಸಾಲಿನ ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕಕ್ಕೆ ಸಂಬಂಧಿಸಿದಂತೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿಯು ವರದಿಯನ್ನು ಒಪ್ಪಿಸಲು ೧೯೮೮ನೇ ಮೇ ತಿಂಗಳ ಅಂತ್ಯದವರೆಗೆ ಕಾಲಾವಧಿಯನ್ನು ವಿಸ್ತರಿಸುವುದು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವರದಿ ಒಪ್ಪಿಸಲು ಕಾಲಾವಧಿಯನ್ನು ವಿಸ್ತರಿಸಲಾಯಿತು.

ಖಾಸಗೀ ಕಾರ್ಯಕಲಾಪಗಳು.

''ಕೇಂದ್ರ ಸರ್ಕಾರ ಅಗತ್ಯ ವಸ್ತುಗಳ ಬೆಲೆಯನ್ನು ವಿಕಾಏಕಿ ಏರಿಸುವುದನ್ನು ಕೈಬಿಡುವ ಕುರಿತು.''

ಅಧ್ಯಕ್ಷರು.—ಈಗ, ಖಾಸಗಿ ಕಾರ್ಯಕಲಾಪಗಳು. ಮಾನ್ಯ ಸದಸ್ಯರಾದ ಶ್ರೀ ಎಂ. ಎಸ್. ಕೃಷ್ಣನ್‌ರವರು ತಮ್ಮ ನಿರ್ಣಯವನ್ನು ಮಂಡಿಸಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಈ ಕೆಳಗಿನ ನಿರ್ಣಯವನ್ನು ನಾನು ಮಾನ್ಯ ಅಧ್ಯಕ್ಷರ ಅನುಮತಿ ಪಡೆದು ಸೂಚಿಸುತ್ತೇನೆ.

''ಖಾದ್ಯ ತೈಲ, ಸಕ್ಕರೆ, ಉಕ್ಕು, ಪೆಟ್ರೋಲ್, ಇತ್ಯಾದಿ ಜನಬಳಕೆ ವಸ್ತುಗಳ ಬೆಲೆಗಳನ್ನು ವಿಕಾಏಕಿ ಕೇಂದ್ರ ಸರ್ಕಾರವು ಏರಿಸಿರುವುದನ್ನು ಕೈಬಿಡಬೇಕೆಂದು ಈ ಸಭೆಯು ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತದೆ,''

ಅಧ್ಯಕ್ಷರು.—ನಿರ್ಣಯವನ್ನು ಮಂಡಿಸಲಾಗಿದೆ. ನಿರ್ಣಯದ ಕುರಿತಂ ಮಾನ್ಯ ಸದಸ್ಯರು ಮಾತನಾಡಬಹುದು.

† ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜೀನಗರ).—ಮಾನ್ಯ ಅಧ್ಯಕ್ಷರೇ, ಈ ನಿರ್ಣಯವು ಅತ್ಯಂತ ಮುಖ್ಯವಾದಂಥ ನಿರ್ಣಯ ಎಂದು ನಾನು ಪರಿಗಣಿಸುತ್ತೇನೆ. ಇದರ ವ್ಯಾಪ್ತಿಯಂ ಕೇಂದ್ರ ಸರ್ಕಾರಕ್ಕೆ ಮಾತ್ರ ಅನ್ವಯಿಸತಕ್ಕಂಥಾದ್ದು ಅಲ್ಲ. ಇದು ರಾಜ್ಯಗಳಿಗೂ ಅನ್ವಯಿಸುತ್ತದೆ. ರಾಜ್ಯ ಸರಕಾರಗಳು ಏನು ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತವೆ ಅದನ್ನು ತೃಪ್ತಿಕರವಾಗಿ ಜಾರಿಗೆ ತರುವುದಕ್ಕೆ ಆಗುವುದಿಲ್ಲ ಎನ್ನುವುದರ ಮೇಲೆಯೂ ಇದು ಹೊಂದಿಕೊಂಡಿದೆ. ರಾಜ್ಯ ಸರಕಾರಗಳಾಗಲೀ, ಕೇಂದ್ರ ಸರಕಾರವಾಗಲೀ, ಒಂದು ಬೆಲೆಯಂನ್ನು ಏರಿಸಿದರೆ ಅದರ ಪ್ರಭಾವ, ಪರಿಣಾಮ, ಎಲ್ಲರ ಮೇಲೆಯೂ ಇರುತ್ತದೆ. ಕೈಗಾರಿಕೆಗಳ ಮೇಲೆ ವ್ಯಾಪಾರಸ್ಥರ ಮೇಲೆ, ಬಳಕೆದಾರರ ಮೇಲೆ, ಮುಂತಾಗಿ ಎಲ್ಲರಿಗೂ ಇದರ ಪರಿಣಾಮ ಬೀರುತ್ತದೆ. ಇಷ್ಟು ಮಾತ್ರವಲ್ಲ,

ಮೂಲಭೂತವಾದಂತಹ ಒಂದು ತತ್ವದ ಅಂಶವೂ ಇದರಲ್ಲಿ ಅಡಗಿರುತ್ತದೆ. ಈ ರೀತಿಯ ಅಡ್ಮಿನಿಸ್ಟರ್ಡ್ ಪ್ರೈಸ್ ಎಂದು ನಾವೇನು ಹೇಳುತ್ತೇವೆ ಅದು ಮಾಡುವುದೇ ಸರಿಯೇ ? ಮಾಡಿದರೆ ಅದನ್ನು ಎಷ್ಟು ದೂರ ಮಾಡಬೇಕು ? ಹೇಗೆ ಮಾಡಬೇಕು ? ಇವುಗಳು ಮೂಲಭೂತವಾದಂತಹ ಪ್ರಶ್ನೆಗಳು. ಪ್ರಜಾಪ್ರಭುತ್ವ ವದ್ಧತಿಯಲ್ಲಿ ಇಂತಹವು ಎಷ್ಟುವಂಟ್ಟಿಗೆ ಸರಿ ಎಂದು ಹೇಳುವುದೂ ಕೂಡ ಮುಖ್ಯವಾದಂತಹ ಪ್ರಶ್ನೆ. ಆದುದರಿಂದ ಈ ನಿರ್ಣಯವು ಅತ್ಯಂತ ಮಂಖ್ಯವಾದಂಥ ನಿರ್ಣಯಂ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇದನ್ನು ನಾನು ಇವೊತ್ತಿನ ದಿವಸ ಅನುಮೋದಿಸುತ್ತಾ, ಈ ಬಗ್ಗೆ ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ಮೊದಲು ಇದರ ಪರಿಣಾಮ ಏನಾಗಿದೆ ಎಂದು ನಾವು ತಿಳಿದುಕೊಳ್ಳಬೇಕು. ಹಲವು ಕಡೆ ಈ ಬೆಲೆಗಳನ್ನು ಜಾಸ್ತಿ ಮಾಡುವುದರಿಂದ ಅದರ ಪರಿಣಾಮದಿಂದ ಉಂಟಾದ ಒಟ್ಟಾರೆ ಚಿತ್ರವನ್ನು ತಿಳಿದುಕೊಂಡರೆ, ಅದರ ಗಂಭೀರತೆಯನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಈ ರೀತಿಯಾಗಿ ನಡೆಯದಿದ್ದರೆ, ಏನಾಗುತ್ತದೆ ಎಂಬ ಬಗ್ಗೆ ಒಂದು ಅಂಶವನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ೯-೧-೧೯೮೮ ರಂದು ಕೇಂದ್ರ ಸರಕಾರದವರು ಪೆಟ್ರೋಲ್‌ನ ಬೆಲೆಯನ್ನು ಏರಿಸಿದರು. ಶೇಕಡಾ ೧೫ ರಷ್ಟು ಬೆಲೆಯನ್ನು ಜಾಸ್ತಿ ಮಾಡಿದ್ದಾರೆ. ಹೀಗೆ ಅದರ ಬೆಲೆ ಏರಿಸಿರುವುದರಿಂದ ಒಂದಂಕಡೆ ಎಷ್ಟು ಜಾಸ್ತಿ ಆಗುತ್ತದೆ ಎಂದರೆ, ಬೆಲೆ ಹೆಚ್ಚುತ್ತಾ ಹೋಗುತ್ತಿರುತ್ತದೆ. ಇವತ್ತು, ಪೆಟ್ರೋಲ್ ಬೆಲೆಯನ್ನು ಜಾಸ್ತಿ ಮಾಡಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಬಾಂಬೆಯಲ್ಲಿ ಪೆಟ್ರೋಲ್ ಬೆಲೆ ೯-೧೪ ರೂಪಾಯಿ ಇದೆ ಕಲ್ಕತ್ತದಲ್ಲಿ ೮-೭೦ ಇದೆ ಮದ್ರಾಸ್‌ನಲ್ಲಿ ೮-೯೮ ಇದೆ ಬೆಂಗಳೂರಿನಲ್ಲಿ ೮-೫೮ ರೂಪಾಯಿ ಇದ್ದಿದ್ದು ಈಗ ೯-೭೯ ಪೈಸೆಯಾಗಿದೆ ಅಂದರೆ ಒಂದು ಲೀಟರಿಗೆ ೧-೨೩ ಪೈಸೆ ಜಾಸ್ತಿಯಾಗಿದೆ. ೧-೨೩ ಪೈಸೆಯನ್ನು ಒಂದು ಲೀಟರ್ ಪೆಟ್ರೋಲಿಗೆ ಒಬ್ಬ ವಂನುಷ್ಯ ಕೊಡಬೇಕಾಗಿದೆ. ಆ ರೀತಿಯ ಒಂದು ಪರಿಸ್ಥಿತಿಯನ್ನು ಇವತ್ತು ತಂದಿದ್ದಾರೆ. ಇದರಿಂದಾಗಿ ಕೇಂದ್ರ ಸರಕಾರಕ್ಕೆ ೨೬೦ ಕೋಟಿ ರೂಪಾಯಿಗಳು ಈ ವರ್ಷದಲ್ಲಿ ಬರುತ್ತದೆ ಈ ಮೂರು ತಿಂಗಳಲ್ಲಿ ೬೫ ಕೋಟಿ ರೂಪಾಯಿಯನ್ನು ಅವರು ಪಡೆಯುತ್ತಾರೆ. ಇದಲ್ಲದೆ ಇನ್ನೊಂದು ಮಂಖ್ಯವಾದ ವಿಷಯವನ್ನು ಹೇಳಬಯಸುತ್ತೇನೆ ಅದೇನೆಂದರೆ ಇವತ್ತು ಕಲ್ಲಿದ್ದಲಿನ ಬೆಲೆಯನ್ನು ಕೂಡ ಜಾಸ್ತಿ ಮಾಡಿದ್ದಾರೆ ಇದನ್ನು ಕೂಡ ಡಿಸೆಂಬರ್ ೨೨ರಂದು ಮಾಡಿದ್ದಾರೆ. ಅದು ಕೂಡ ಕೇಂದ್ರ ಸರಕಾರಕ್ಕೇ ಬರುತ್ತದೆ. ೨೯ ರೂಪಾಯಿಯಂತೆನ್ನು ಒಂದು ಟನ್‌ಗೆ ಜಾಸ್ತಿ ಮಾಡಿದ್ದಾರೆ. ೧೯೦ ರೂಪಾಯಿ ಇದ್ದುದನ್ನು ೨೯೦ ರೂಪಾಯಿ ಮಾಡಿದ್ದಾರೆ. ಶೇಕಡ ೧೫ ರಷ್ಟು ಜಾಸ್ತಿ ಮಾಡಿದ್ದೇವೆಂದು ಹೇಳುತ್ತಾರೆ. ೧೭೦ ಟನ್ ಕಲ್ಲಿದ್ದಲನ್ನು ಒಂದು ದಿನಕ್ಕೆ ಇವೊತ್ತು ಉತ್ಪಾದನೆ ಮಾಡುತ್ತಿದ್ದೇವೆ ಅದರಲ್ಲಿ ಒಂದು ವರ್ಷಕ್ಕೆ ೪೯೩ ಕೋಟಿ ರೂಪಾಯಿಗಳು ಬರುತ್ತದೆ. ಇದನ್ನೂ ಕೂಡ ೨೨ರ ಡಿಸೆಂಬರ್‌ನಂದು ಮಾಡಿದ್ದಾರೆ, ಆ ದಿವಸ ಏನು ವೈಶಿಷ್ಟ್ಯವೋ ಗೊತ್ತಾಗಲಿಲ್ಲ, ಸಕ್ಕರೆ ಬೆಲೆಯನ್ನು ಕೂಡ ಜಾಸ್ತಿ ಮಾಡಿದರು. ರಿಟೇಲ್ ಇಷ್ಯೂ ಪ್ರೈಸ್ ಒಂದು ಕೆ. ಜಿ. ಗೆ ೪-೮೦ ಇದ್ದುದನ್ನು ೫-೭೦ ಮಾಡಿದ್ದಾರೆ. ಇದಕ್ಕೆ ಕಾರಣ ಏನು ಹೇಳುತ್ತಾರೆಂದರೆ ಸಕ್ಕರೆ ಕಾರ್ಖಾನೆ ಮಾಲೀಕರುಗಳಿಗೆ ಮಗರಕೇನ್ ಬೆಲೆಯನ್ನು ಜಾಸ್ತಿ ಮಾಡಿದ್ದೇವೆ ಷುಗರ್‌ಕೇಷನ್ ಬೆಳೆಯುವವರಿಗೆ ಹೆಚ್ಚು ಹಣವನ್ನು ಕೊಡಬೇಕಾಗಿ ಬಂತು ಎಂದು ಹೇಳುತ್ತಾರೆ. ಅದೇ ದಿವಸ ಇಂಪೋರ್ಟೆಡ್ ಹಾಗೆಯೇ ಇವತ್ತಿನ ದಿವಸ ಐದಾರು ಸಾವಂಗ್ರಿಗಳ ಮೇಲೆ ಬೆಲೆಯನ್ನು ಜಾಸ್ತಿ ಮಾಡಲಾಗಿದೆ. ಉದಾಹರಣೆಗೆ ಸ್ಟೀಲ್ ಕೋಲಾ, ಎಡಿಬಲ್ ಆಯಿಲ್ ಷುಗರ್, ಬಲ್ಕ್ ಡ್ರಗ್ಸ್ ಹೀಗೆ ಎಲ್ಲದರ ಮೇಲೂ ಹಾಗೂ ಪೆಟ್ರೋಲ್ ಬೆಲೆಯನ್ನು ಕೂಡಾ ಡಿಸೆಂಬರ್ ೨೨ ರಿಂದ ಹಿಡಿದು ಜನವರಿ ೯ನೇ ತಾರೀಖಿನವರೆಗೆ ಐದಾರು ಸಾವಂಗ್ರಿಗಳ ಮೇಲೆ ಏಕಾಏಕಿ ಜಾಸ್ತಿ ಮಾಡಿದ್ದಾರೆ. ಇದೇನು ಮೊದಲನೆಯ ಸಾರಿ ಮಾಡಿರುವುದು ಅಲ್ಲ. ತಮಗೆ ತಿಳಿದಿರುವ ಹಾಗೆ ಕೇಂದ್ರ ಸರ್ಕಾರದವರು ಮೊದಲನೇ ಬಾರಿಗೆ ಈ ರೀತಿ ಮಾಡಿದರೆ ತಪ್ಪಾಗುತ್ತದೆ. ಇದು ಒಂದು ತರಹದ ಧೋರಣೆ ಯಾಗಿದೆ. ಇವತ್ತಿನ ದಿವಸ ಪ್ರತಿಯೊಂದು ಕೂಡ ಇಂದಿರಾಗಾಂಧಿಯವರ ಕಾಲದಿಂದ ಶುರು ಆಯಿತು, ಅದನ್ನು ರಾಜೀವ್‌ಗಾಂಧಿಯವರು ಮುಂದುವರೆಸಿಕೊಂಡು ಬರುತ್ತಿದ್ದಾರೆ. ಇದರಲ್ಲಿ ಒಂದು ಮುಖ್ಯವಾದ ಪ್ರಶ್ನೆ ಏನೆಂದರೆ ಮೊದಲನೇ ಪ್ರಶ್ನೆ ಬರುವುದು ಏನು ಏಂದರೆ ಇದನ್ನು ಜಾಸ್ತಿ ಯಾವಾಗ ಮಾಡುತ್ತಾರೆ ಎಂದರೆ ಡಿಸೆಂಬರ್‌ನಲ್ಲಿ ಮಾಡುತ್ತಾರೆ, ಜನವರಿ ಪಾರ್ಲಿಮೆಂಟರಿ

ಬಜೆಟ್ ಸೆಷನ್ ಸೇರುವ ಮುಂಚೆ ಈ ರೀತಿ ಬೆಲೆಯನ್ನು ಜಾಸ್ತಿ ಮಾಡುತ್ತಾರೆ. ಈ ರೀತಿ ಪಾರ್ಲಿಮೆಂಟಿನ ನೀತಿಯನ್ನು ಉಲ್ಲಂಘಿಸಿ ಪ್ರಜಾಪ್ರಭುತ್ವದ ತತ್ವಗಳನ್ನು ಉಲ್ಲಂಘಿಸಿ ಮಾಡುತ್ತಿರುವುದು ಸರಿಯೇ ? ಇದು ಮುಖ್ಯವಾದ ಪ್ರಶ್ನೆ. ಇದನ್ನು ನೋಡಿದರೆ ಕೇಂದ್ರ ಸರ್ಕಾರವನ್ನು ನಾನು ತೀವ್ರವಾಗಿ ಖಂಡಿಸಬೇಕಾಗಿದೆ. ಏಕೆಂದರೆ ಪ್ರಜಾಪ್ರಭುತ್ವದ ಮೌಲ್ಯಗಳ ಬಗ್ಗೆ ಎನೂ ಮಾತನಾಡುತ್ತಾರೆ, ರಾಜೀವ್ ಗಾಂಧಿಯವರಾಗಲೀ, ಕಾಂಗ್ರೆಸ್ ಪಕ್ಷದವರಾಗಲೀ ಯಾರೇ ಆಗಲೀ ಈ ಪ್ರಜಾಪ್ರಭುತ್ವದ ಬಗ್ಗೆ ಏನೂ ಮಾತನಾಡುತ್ತಾರೆ. ಡಿಫೆಂಡರ್ಸ್ ಆಫ್ ಡೆಮಾಕ್ರಸಿ, ಪ್ರಜಾಪ್ರಭುತ್ವವನ್ನು ಉಳಿಸುವುದಕ್ಕೆ ಪ್ರಯತ್ನ ಪಡುತ್ತಿದ್ದೇವೆ, ಅದನ್ನು ಬೆಳಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಎಂದೆಲ್ಲಾ ಹೇಳುತ್ತಾರೆ. ನಿಜವಾಗಿಯೂ ಈ ರೀತಿ ಮಾಡಿ ಪ್ರಜಾಪ್ರಭುತ್ವವನ್ನು ಕೊಲೆ ಮಾಡುತ್ತಾರೆ. ಅಡ್ಮಿನಿಸ್ಟರ್ಡ್ ಪ್ರೈಸಸ್‌ನ್ನು ಹೆಚ್ಚು ಹೆಚ್ಚು ಮಾಡಿ ಯಾವ ಪಾರ್ಲಿಮೆಂಟ್ ಸದಸ್ಯರನ್ನೂ, ಚುನಾಯಿತ ಪ್ರತಿನಿಧಿಗಳನ್ನು ಕೇಳದೆ ಇಷ್ಟೊಂದು ದುಬಾರಿ ಮಾಡಿರುವುದು ಯಾವ ತತ್ವಕ್ಕೂ ಅನುಗುಣವಾಗಿಲ್ಲ, ಯಾವ ಪ್ರಜಾಪ್ರಭುತ್ವಕ್ಕೂ ಇದು ಅನುಗುಣವಾಗಿಲ್ಲ, ಯಾವ ರೂಲ್ಸ್ ಆಫ್ ಪ್ರೊಸೀಜರ್ ಕೂಡಾ ಇಲ್ಲ, ಯಾವ ಪಾರ್ಲಿಮೆಂಟರಿ ಕನ್‌ವೆನ್ಷನ್ ಕೂಡ ಇಲ್ಲ ಯಾವ ದೇಶದಲ್ಲೂ ಈ ರೀತಿಯ ಪರಿಸ್ಥಿತಿ ಇವತ್ತಿನ ದಿವಸ ಇಲ್ಲ. ಯಾವ ಇವತ್ತಿನ ದಿವಸ ಅಡ್ಮಿನಿಸ್ಟರ್ಡ್ ಪ್ರೈಸಸ್ ಬಗ್ಗೆ ನೋಡಿದರೆ ಬೇರೆ ದೇಶಗಳಲ್ಲಿ ಬೆಲೆಗಳನ್ನು ನೋಡಿದರೆ ನಮಗೂ ಅವರಿಗೂ ಎಷ್ಟೊಂದು ವ್ಯತ್ಯಾಸ ಇದೆ ಎನ್ನುವುದು ನಮಗೆ ಗೊತ್ತಾಗುತ್ತದೆ. ಷುಗರ್ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಪೆಟ್ರೋಲ್ ಬಳಕೆಯನ್ನು ಎಲ್ಲರೂ ಮಾಡುತ್ತಾರೆ. ನಮ್ಮ ದೇಶದಲ್ಲಿ ಅದರಂತೆ ಬೇರೆ ದೇಶಗಳಲ್ಲೂ ಕೂಡಾ ಪೆಟ್ರೋಲ್ ಬಳಕೆಯನ್ನು ಮಾಡುತ್ತಾರೆ. ಆ ರೀತಿಯಲ್ಲಿ ಬಳಕೆ ಮಾಡುತ್ತಿರುವ ಪೆಟ್ರೋಲ್ ಬೆಲೆ ಎಷ್ಟೆಷ್ಟು ಇದೆ ಎಂದರೆ ಆಫ್ಘಾನಿಸ್ತಾನದಲ್ಲಿ ಒಂದು ಲೀಟರ್‌ಗೆ ೩.೨೨ ಪೈಸೆ. (ಮೂರು ರೂಪಾಯಿ ಇಪ್ಪತ್ತೆರಡು ಪೈಸೆ). ಬಾಂಗ್ಲಾದೇಶದಲ್ಲಿ ೬.೨೨ ಪೈಸೆ. ಚೈನಾ ದೇಶದಲ್ಲಿ ೨.೯೪ ಪೈಸೆ ಇಂಡೋನೇಷ್ಯಾದಲ್ಲಿ ೨.೯೯ ಪೈಸೆ, ಈ ರೀತಿ ಬೆಲೆಗಳು ಇವೆ. ಇವತ್ತು ಅನೇಕ ಕಡೆಗಳಲ್ಲಿ ಪೆಟ್ರೋಲ್ ಬೆಲೆಯನ್ನು ೧೫ ಪರ್‌ಸೆಂಟ್‌ನಿಂದ ೨೦ ಪರ್‌ಸೆಂಟ್‌ವರೆಗೂ ಕಟ್ ಮಾಡಿದ್ದಾರೆ. ಈ ಪ್ರಪಂಚದಲ್ಲಿ ಅಂತರರಾಷ್ಟ್ರೀಯವಾಗಿ ತಮಗೆ ಗೊತ್ತಿರುವ ಹಾಗೆ ಪೆಟ್ರೋಲ್ ಬೆಲೆಯನ್ನು ಜಾಸ್ತಿ ಮಾಡಕೂಡದು, ಆ ರೀತಿಯಲ್ಲಿ ಜಾಸ್ತಿ ಮಾಡುವುದು ಸರಿಯಲ್ಲ, ಏಕೆಂದರೆ ಮಾರ್ಕೆಟ್ ಎಕಾನಮಿ ಯಾವ ರೀತಿಯಲ್ಲಿ ಪ್ರಪಂಚದಲ್ಲಿ ಇದೆ ಎಂದರೆ ವಿನಾಕಾರಣ ಜಾಸ್ತಿ ಮಾಡಿದರೆ ತೊಂದರೆ ಯಾಗುತ್ತದೆ, ಅದರಲ್ಲಿ ಲಾಭ ಕೂಡ ಬರುವುದಿಲ್ಲ ಎಂದು ತಿಳಿದುಕೊಂಡು ಪೆಟ್ರೋಲ್ ಬೆಲೆಯನ್ನು ಕಡಿಮೆ ಮಾಡಬೇಕೆಂದು ಇದೆ. ಇವತ್ತು ಏನಾಗಿದೆ ಎಂದರೆ ಹಿಂದೆ ಈ ಪೆಟ್ರೋಲ್ ಬಗ್ಗೆ ಆದಿಪತ್ಯವನ್ನು ನಮ್ಮ ದೇಶದಲ್ಲಿಯೇ ಅಲ್ಲ, ಪ್ರಪಂಚದಲ್ಲಿ ಅಮೇರಿಕನ್ ಸಾಮ್ರಾಜ್ಯ ಶಾಹಿಗಳು ಅವರಿಗೆ ಸಂಬಂಧಪಟ್ಟ ಕಂಪನಿಗಳವರು ಹೊಂದಿದ್ದರು. ಅವರು ಕಂಪನಿಗಳನ್ನು ನಡೆಸಿಕೊಂಡು ಬರುತ್ತಿದ್ದರು. ತಮಗೆ ಗೊತ್ತಿರುವ ಹಾಗೆ ಯಶ್‌ವೋ ಬರ್ಮಾಷೆಲ್ ಮತ್ತಿತರ ಕಂಪನಿಗಳನ್ನು ನಡೆಸಿಕೊಂಡು ಬರುತ್ತಿದ್ದರು. ಅವರು ಅರಬ್ ರಾಷ್ಟ್ರಗಳ ಮೇಲೆ ಹಿಡಿತವನ್ನು ಇಟ್ಟುಕೊಂಡಿದ್ದರು. '' ಪೆಟ್ರೋಲ್ ಈಸ್ ಪಾಲಿಟಿಕ್ಸ್ '' ಎಂದು ಹೇಳುತ್ತಾರೆ. ಅದರ ಮೂಲಕ ರಾಜಕೀಯ ಕೈವಾಡಗಳನ್ನು ಹಿಡಿದುಕೊಂಡಿದ್ದರು. ಈ ರೀತಿ ಅವರು ಅನೇಕ ದೇಶಗಳನ್ನು ಕಬಳಿಸಿದರು, ಹಲವು ನಾಯಕರನ್ನು ಉರುಳಿಸಿದರು, ಕೆಲವರನ್ನು ಕೊಂದು ಹಾಕಿದರು. ಆ ರೀತಿಯಲ್ಲಾ ಆಗಿ ತಮ್ಮದ ಆದಂಥ ರಾಜ್ಯಗಳನ್ನು ಸ್ಥಾಪಿಸಿದರು. ಇದೆಲ್ಲಾ ಒಟ್ಟು ಚರಿತ್ರೆ ಪೆಟ್ರೋಲಿನ ಬಗ್ಗೆ. ಪೆಟ್ರೋಲ್ ಬಗ್ಗೆ ಇಷ್ಟೆಲ್ಲಾ ನಡೆದಮೇಲೆ ಆಗ ಜನರು ಎದ್ದರು ಈ ರೀತಿಯಲ್ಲಿ ಅದಾಗ ಸಾಮ್ರಾಜ್ಯ ಶಾಹಿಗಳು ಸ್ವಲ್ಪ ಹಿಂಜರಿಯಬೇಕಾಯಿತು. ಆಗ ಅಮೇರಿಕನ್ನರ ಕೈವಾಡ ಸಡಿಲವಾಗುತ್ತಾ ಬಂತು, ಆಗ ಓಪನ್ ಕಂಟ್ರೀಸ್ ಜನರು ಏನು ಇದ್ದರು, ಆಗ ಅವರು ಪೆಟ್ರೋಲನ್ನು ನೀವು ನಿರ್ಧಾರ ಮಾಡುವುದಕ್ಕಾಗುವುದಿಲ್ಲ, ಅದನ್ನು ನಾವು ನಿರ್ಧಾರ ಮಾಡುತ್ತೇವೆ ಎಂದು ತೀರ್ಮಾನವನ್ನು ಮಾಡಿದರು. ಅವರು ಯಾವಾಗ ನಿರ್ಧಾರ ಮಾಡುವುದಕ್ಕೆ ಶುರುಮಾಡಿದರೋ ಅದಾದಮೇಲೆ ಸಾಮಾಜ್ಯ ಶಾಹಿಗಳ ಕೈವಾಡ ಸ್ವಲ್ಪಮಟ್ಟಿಗೆ ಕಡಿಮೆ ಆಗುವುದಕ್ಕೆ ಸಾಧ್ಯವಾಯಿತು. ಕೈವಾಡ ಪೂರ್ತಿ ಹೋಗಿಬಿಟ್ಟಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಅಮೇರಿಕನ್ ಸಾಮ್ರಾಜ್ಯ ಶಾಹಿಯಂ ಕೈವಾಡ ಏನು ಇದೆ, ಇವತ್ತು ಬೈರೂತ್‌ನಲ್ಲಿ ಏನು ನಡೆಯುತ್ತಿದೆ. ಲೆಬನಾನ್‌ನಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನೆಲ್ಲ ನೋಡಂತಿದ್ದೇವೆ. ಲೆಬನಾನ್ ಮುಖಾಂತರ ಪ್ಯಾಲಸ್ಟೈನ್ ಲಿಬರ್ಟಿ ಆರ್ಗನೈಜೇಷನನ್ನು ಮುಗಿಸಿಬಿಡಬೇಕು ಎಂದು ಪ್ರಯತ್ನ ಪಡುತ್ತಿರುವುದು

ಗೊತ್ತಿದೆ. ಇನ್ನು ಸ್ವಲ್ಪ ಸಾಮ್ರಾಜ್ಯ ಶಾಹಿಗಳ ಕೈವಾಡ ಇದೆ. ಅದು ಪೂರ್ತಿ ತಪ್ಪಿ ಹೋಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಇದೆಲ್ಲಾ ಚರಿತ್ರೆ.

ಎಡಿಬಲ್ ಆಯಿಲ್ ಏನಿದೆ ಅದನ್ನು ಮಧ್ಯಮ ವರ್ಗದವರು ಬಳಸುತ್ತಾರೆ ಅದರ ಬೆಲೆಯನ್ನು ಕೂಡ ಜಾಸ್ತಿ ಮಾಡಿದ್ದಾರೆ. ಒಂದು ಕೆ ಜಿ. ಗೆ ೯ ರೂಪಾಯಿ ಇದ್ದುದನ್ನು ೧೧ ರೂಪಾಯಿಗೆ ಏರಿಸಿದ್ದಾರೆ. ಅಂದರೆ ಸುಮಾರು ೨೨.೦೨ ಪರ್ಸೆಂಟ್‌ನಷ್ಟು ಜಾಸ್ತಿಯಾಗಿದೆ. ಇದರ ಬೆಲೆ ಪ್ರಭಾವ ರೀಟೈಲ್ ಪ್ರೈಸ್ ಮೇಲೂ ಇರುತ್ತದೆ. ರೀಟೈಲ್ ಪ್ರೈಸ್‌ನಲ್ಲಿ ಎರಡು ಕೆ. ಜಿ. ಗೆ ೩೧–೭೦ ಪೈಸೆ ಇದ್ದುದು ೩೬–೭೦ ಪೈಸೆಯಾಗಿದೆ. ಬ್ಲಾಕ್ ಮಾರ್ಕೆಟ್‌ನಲ್ಲಿ ಕೆಲವು ಕಡೆಗಳಲ್ಲಿ ೩೭–೩೮–೪೦ ರೂಪಾಯಿಗೆ ಮಾರುತ್ತಾರೆ. ಅಂತಹ ಪರಿಸ್ಥಿತಿ ಬಂದಿದೆ. ೨೨ರ ತನಕ ಈ ಕೆಲಸ ನಡೆಯಿತು. ೨೪ಕ್ಕೆ ಇನ್ನೊಂದು ಅಡ್ಮಿನಿಸ್ಟ್ರೇಟರ್ ಪ್ರೈಸ್ ಬಂತು ಸ್ಟೀಲ್ ಪ್ರಾಡಕ್ಟ್ಸ್ ಮತ್ತು ಉಕ್ಕಿಗೆ ಸಂಬಂಧ ಪಟ್ಟಂತಹ ಸಾಮಗ್ರಿಗಳ ಬೆಲೆಯನ್ನು ೪ ಪರ್ಸೆಂಟ್‌ನಿಂದ ಹಿಡಿದು ೨೪ ಪರ್ಸೆಂಟ್‌ನಷ್ಟು ಜಾಸ್ತಿ ಮಾಡಿದ್ದಾರೆ. ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ ಇದರಿಂದಾಗಿ ೧೨೦ ಕೋಟಿ ರೂಪಾಯಿ ಈ ವರ್ಷ ಬರುತ್ತದೆಂದು ಹೇಳಿದ್ದಾರೆ. ೪೮೦ ಕೋಟಿ ರೂಪಾಯಿಗಳ ವರಮಾನ ಒಂದು ವರ್ಷಕ್ಕೆ ಬರುತ್ತದೆ ಎಂದು ಅವರೇ ಹೇಳಿದ್ದಾರೆ. ಇದು ಸಾಲದು ಎಂಬಂತೆ ಜನವರಿ ೩ನೇ ತಾರೀಖು ಐದು ಅತಿ ಮುಖ್ಯ ವಾದಂತಹ ಬಲ್ಕ್ ಡ್ರಗ್ಸ್ ಬೆಲೆಯನ್ನು ಸಿಕ್ಕಾ ಪಟ್ಟೆ ಜಾಸ್ತಿ ಮಾಡಿದ್ದಾರೆ. ಜನಗಳಿಗೆ ಯಾವುದೂ ಅವಶ್ಯಕವಾಗಿ ಬೇಕಾಗಿದೆ ಅದರ ಬೆಲೆಯನ್ನು ಜಾಸ್ತಿ ಮಾಡಿದ್ದಾರೆ.

ನಮ್ಮ ದೇಶದಲ್ಲಿಯೂ ಸಹ ಅವರ ಕೈವಾಡ ಇದೆ. ಇದು ತಪ್ಪುಗಳ್ಳರಿಗೂ ಗೊತ್ತಿರುವ ವಿಷಯ. ಇಲ್ಲಾ ಸಹ ಸಿ. ಐ. ಎ. ನವರು ಮತ್ತಿತರರು ಶಕ್ತಿಗಳು ಖಲಿಸ್ತಾನ್ ಮತ್ತಿತರ ಚಳುವಳಿ ಮುಖಾಂತರ ದೇಶದಲ್ಲಿ ಅಭದ್ರತೆ ತರುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ ಇದು ಎಲ್ಲರಿಗೂ ಗೊತ್ತಿರುವ ವಿಷಯ ಇಂತಹ ಒಂದು ಪವರ್‌ಫುಲ್ ಶಕ್ತಿ, ಬಹಳ ಬಲವಾದಂತಹ ಪ್ರತಿಗಾಮಿ ಶಕ್ತಿ, ಸಾಮ್ರಾಜ್ಯ ಶಾಹಿ ಶಕ್ತಿಗಳು ದೇಶದಲ್ಲಿ ಎಲ್ಲಾ ರೀತಿಯಿಂದ ತೊಂದರೆ ಕೊಡುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ. ಆಯಿಲ್ ಪ್ರೈಸ್, ಇದನ್ನು ಮಾತ್ರ ನಾವು ಮುಟ್ಟುವ ಹಾಗಿಲ್ಲ, ಅದನ್ನು ಕೂಡ ಈಗ ಮುಟ್ಟಬೇಕಾಗುತ್ತದೆ ಇಂತಹವರೆಲ್ಲಾ ಕಡಿಮೆ ಮಾಡಿರಬೇಕಾದರೆ India is the only country to increse the price of petror ಪ್ರಪಂಚದಲ್ಲಿ ಎಲ್ಲಾ ಕೂಡ ಜಾಸ್ತಿ ಆಗಿಲ್ಲ. ಆಯಿಲ್ ಬೆಲೆ, ಪೆಟ್ರೋಲ್ ಬೆಲೆ ಇಲ್ಲಿ ಮಾತ್ರ ಜಾಸ್ತಿ ಆಗಲೂ. India is the only country that has increased. ಇದನ್ನು ಇವೊತ್ತಿ ಬಹಳ ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಏಕೆ ಮಾಡಿದ್ದಾರೆ, ಅಡ್ಮಿನಿಸ್ಟ್ರೇಟಿವ್ ಪ್ರೈಸ್ ಜಾಸ್ತಿ ಮಾಡುವುದಕ್ಕೆ ಏನು ಕಾರಣ? ಇದು ಮುಖ್ಯವಾದ ವಿಷಯ. ಏಕೆ ಜಾಸ್ತಿಯಾಗಿದೆ ಎಂದು ಕಾರಣ ಹೇಳುವುದಕ್ಕಿಂತ ಮುಂಚೆ ಇದರ ಎಫೆಕ್ಟ್ ಏನು ಇದೆ ಎಂದು ಹೇಳಿ ಆಮೇಲೆ ಕಾರಣ ಹೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರೈಸ್ ಜಾಸ್ತಿ ಆದರೆ ಎಷ್ಟು ಏನು ಆಗಿದೆ ಅಂದರೆ ಈಗ ಕೋಲ್ ಪ್ರೈಸ್ ಜಾಸ್ತಿ ಇದೆ. ಇದು ಜಾಸ್ತಿ ಆದರೆ ಪವರ್ ಪ್ಲಾಂಟ್‌ಗೆ ತೊಂದರೆಯಾಗುತ್ತದೆ, ಇದರಿಂದ ವಿದ್ಯುಚ್ಛಕ್ತಿ ಆಗರಗಳಿಗೆ ತೊಂದರೆ ಯಾಗುತ್ತದೆ. ಇವರಿಗೆ ಕಲ್ಲಿದ್ದಲು ಬೇಕಾಗುತ್ತದೆ. ರಾಯಂಜೂರು ಥರ್ಮಲ್, ಪ್ಲಾಂಟ್ ಕೋಲ್ ಬೇಸಡ್ ಥರ್ಮಲ್ ಪ್ಲಾಂಟ್ ಆಗಲಿ. ಸೂಪರ್ ಥರ್ಮಲ್ ಪವರ್ ಪ್ಲಾಂಟ್ ಆಗಲಿ, ಯಾವುದೇ ಇರಲಿ, ನಮ್ಮ ರಾಜ್ಯದಲ್ಲಿ ಆಗಲಿ ಬೇರೆ ರಾಜ್ಯದಲ್ಲಿಯೂ ಅಷ್ಟೇ ರಾಷ್ಟ್ರದಲ್ಲಿಯೂ ಅಷ್ಟೇ. coal based power plant, on shore, off shore ಇರಲಿ, ಏಲ್ಲೇ ಇರಲಿ ಅವಕ್ಕಂತೂ ಇವೊತ್ತಿನ ದಿವಸ ಕೋಲ್ ಬೇಕಾಗುತ್ತದೆ. ಕೊಲ್ ಬೆಲೆ ಜಾಸ್ತಿ ಆಯಿತು ಎಂದರೆ ಅಡ್ಮಿನಿಸ್ಟ್ರೇಟೀವ್ ಪ್ರೈಸಸ್ ಪ್ಲಾಂಟ್ ಜಾಸ್ತಿ ಆಯಿತು. ನಂತರ ಪವರ್ ಪ್ಲಾಂಟ್‌ನ ಪ್ರೊಡಕ್ಷನ್ ಜಾಸ್ತಿ ಆಯಿತು, ಪ್ರೊಡಕ್ಷೆಕ್ ಜಾಸ್ತಿ ಆದರೆ ಎಲೆಕ್ಟ್ರಿಸಿಟಿ ಬೆಲೆ ಜಾಸ್ತಿ ಆಗುತ್ತದೆ. ಎಲೆಕ್ಟ್ರಿಸಿಟಿ ಬೆಲೆ ಜಾಸ್ತಿ ಆದರೆ ಮತ್ತೆ ಪುನಃ ಎಲೆಕ್ಟ್ರಿಸಿಟಿ ಛಾರ್ಜ್ ಜನ ಸಾಮಾನ್ಯರ ಮೇಲೆ ಹೊರಿಸ ಬೇಕಾಗುತ್ತದೆ. ಇಂಥ ಪರಿಸ್ಥಿತಿ ಇವೊತ್ತಿನ ದಿವಸ ರಾಜ್ಯ ಸರ್ಕಾರಗಳಿಗೆ ಬರುತ್ತದೆ. ಈ ಕೆಟ್ಟ ಕೆಲಸವನ್ನು ರಾಜ್ಯ ಸರ್ಕಾರಗಳಿಗೆ ಬಿಟ್ಟು ಬಿಡುತ್ತಾರೆ ಇವರೇನೋ ಕೋಲ್ ಪ್ರೈಸ್ ಜಾಸ್ತಿ ಮಾಡಿ ಬಿಟ್ಟರು ಪ್ರೈಸ್ ಜಾಸ್ತಿ ಮಾಡುವ ರಾಜ್ಯ ಸರ್ಕಾರಗಳಿಗೆ ಬಿಡುತ್ತಾರೆ. ಇದು ದರಿದ್ರ, ಅರಿಷ್ಟ ಪರಿಸ್ಥಿತಿ ಒಂದು ಕಡೆ ಜನರ ಮೇಲೆ ಹೊರೆ ಆದರೆ ಇನ್ನೊಂದು ಕಡೆ ರಾಜ್ಯಕ್ಕೂ ಅನುಕೂಲವಾಗುವುದಿಲ್ಲ ಇಂತಹ ಪರಿಸ್ಥಿತಿ ಬರುತ್ತದೆ. ಪವರ್ ಪ್ಲಾಂಟ್ ಜಾಸ್ತಿಯಾಗುತ್ತದೆ. ಇದು ಒಂದು ಎರಡನೆಯದಾಗಿ

ರೈಲ್ವೇಸ್ ಬೇರ್‌ಬಹಳ ಜಾಸ್ತಿಯಾಗುತ್ತದೆ. ರೈಲ್ವೆ ಕೂಡ ಇವೊತ್ತು ಪೂರ್ತಿಯಾಗಿ ಡೀಸಲೈನೇಷನ್ ಆಗಿಲ್ಲ.ಇನ್ನೂ ಪೂರ್ತಿಯಾಗಿ ಎಲೆಕ್ಟ್ರಿಕ್ ಟ್ರಾಕ್ಷನ್ ಬಂದಿಲ್ಲ.ರೈಲ್ವೇಸ್‌ಗೆ ಕೋಲ್ ಬೇಕಾಗುತ್ತದೆ. ಕೋಲ್ ಬೇಕಾದರೆ ಖಂಡಿತವಾಗಿ ಪ್ಯಾಸೆಂಜರ್ ರೇಟ್ಸ್ ಜಾಸ್ತಿಯಾಗುತ್ತದೆ. ಇದು ತಮಗೆ ಗೊತ್ತಿರುವ ವಿಷಯ ಇವೊತ್ತಿನ ದಿವಸ haulage of goods...ನೋಡಿದರೆ, ಅದಕ್ಕೆ ಕೂಡ ಕಲ್ಲಿದ್ದಲು ಬೇಕಾಗುತ್ತದೆ. haulage ಮಾಡುವವನಿಗೆ ಖಂಡಿತ ಪೈಸ್ ಜಾಸ್ತಿಯಾಗುತ್ತದೆ. ಆದರೆ ಪೈಸ್ ಜಾಸ್ತಿ ಆದರೆ ವ್ಯಾಪಾರಿಗಳಿಗೆ ಜಾಸ್ತಿ ತೊಂದರೆ ಆಗುತ್ತದೆ. ವ್ಯಾಪಾರಿಗಳು ಮತ್ತೆ ನಮ್ಮ ಬೆಲೆಯನ್ನು ಜಾಸ್ತಿ ಮಾಡಿದರೆ ಅದರ ಹೊರೆ ಅನಿವಾರ್ಯವಾಗಿ ಜನಸಾಮಾನ್ಯರ ಮೇಲೆ ಬೀಳುತ್ತದೆ. ಇಂಥ ಪರಿಸ್ಥಿತಿಯಲ್ಲಿ ರೈಲ್ವೆ ಪ್ಯಾಸೆಂಜರ್ ರೇಟ್ಸ್ ಇನ್ನೂ ಜಾಸ್ತಿಯಾಗುವಂತಹ ಪರಿಸ್ಥಿತಿ ಇದೆ, ಮೂರನೆಯದಾಗಿ ಇವೊತ್ತಿನ ದಿವಸ ಕೋಲ್ ಪೈಸ್ ಜಾಸ್ತಿ ಆದರೆ ಸ್ಟೀಲ್ ಪೈಸ್ ಜಾಸ್ತಿಯಾಗುತ್ತದೆ. ಆಡ್ಮಿನಿಸ್ಟ್ರೇಟೀವ್ ಪ್ರೈಸ್ ಬಿಟ್ಟು ಬಿಡಿ. ಆಡ್ಮಿನಿಸ್ಟ್ರೇಟೀವ್ ಪ್ರೈಸ್ ಜಾಸ್ತಿ ಮಾಡಿದ ನಂತರ, ಕೋಲ್ ಪ್ರೈಸ್ ಜಾಸ್ತಿ ಆಗುತ್ತದೆ, ಕೋಲ್ ಪ್ರೈಸ್ ಜಾಸ್ತಿ ಮಾಡಿದ ತಕ್ಷಣ ಸ್ಟೀಲ್ ಪ್ರೈಸ್ ಜಾಸ್ತಿ ಮಾಡಬೇಕಾಗುತ್ತದೆ. ಯಾವ ಯಾವ ಬೆಲೆ ಇನ್‌ಪುಟ್ಸ್ ಇದೆ ಅವುಗಳನ್ನು ನೀವು ಒಳಗಡೆ ಸೇರಿಸಿಕೊಳ್ಳಬೇಕಾದರೆ, ಕೈಗಾರಿಕೆಯಲ್ಲಿ ಅಳವಡಿಸಿಕೊಳ್ಳಬೇಕಾದರೆ ನೀವು ಉಕ್ಕಿನ ಬೆಲೆಯಲ್ಲಿ ಏರಿಕೆಯನ್ನು ಮಾಡುವ ಅಭಿಪ್ರಾಯವನ್ನು ಸರ್ಕಾರದ ವಕ್ತಾರರು, ಬಂಡವಾಳಗಾರರು ಎಲ್ಲರೂ ಸೇರಿ ಇವೊತ್ತಿನ ದಿವಸ ವ್ಯಕ್ತ ಮಾಡುತ್ತಿದ್ದಾರೆ. ಇದು ಬಹಳ ಮುಖ್ಯವಾದಂಥ ವಿಷಯ ಇದರ ಎಫೆಕ್ಟ್ ಬಹಳ ಇದೆ. ಇನ್ನು ಶುಗರ್ ಪ್ರೈಸ್ ಬಗ್ಗೆ ಹೇಳುವುದಾದರೆ ಶುಗರ್ ಪ್ರೈಸ್ ಏಕೆ ಜಾಸ್ತಿ ಆಯಿತು ಇದು ಮುಖ್ಯವಾದಂತ ವಿಷಯ. ಶುಗರ್ ಪ್ರೈಸ್, ಅವರು ಹೇಳಿರುವ ಕಾರಣ ಕೇಂದ್ರ ಸರ್ಕಾರದಿಂದ ಆಗಿರುವುದು ಎನ್ನುವುದು ನ್ಯಾಯವಾದ ಕಾರಣವಲ್ಲ.ಏಕೆಂದರೆ ಯಾರು ಇವೊತ್ತು ಕಬ್ಬು ಬೆಳೆಗಾರರು ಇದ್ದಾರೆ ಆ ಕಬ್ಬು ಬೆಳೆಗೆ ಒಂದು ಟನ್‌ಗೆ ೧೮೦ರೂಪಾಯಿಯಿಂದ ೧೮೫ ರೂಪಾಯಿಯ ವರೆಗೆ ಜಾಸ್ತಿ ಮಾಡಿದ್ದೀರಿ, ಇದರಿಂದ ಹೆಚ್ಚು ಬೆಲೆ ಕೊಡಬೇಕಾಗಿದೆ ಎಂದು ಹೇಳುತ್ತೀನಿ. ಕಬ್ಬುಬೆಳೆಗಾರರಿಗೆ ಬೆಲೆ ಜಾಸ್ತಿ ಕೊಡ ಬೇಕಾಗಿದೆ ಎನ್ನುವ ಅಂಶವನ್ನು ಒಪ್ಪಿಕೊಂಡರೂ ಕೂಡ ನಿಜಾಂಶ ಕಬ್ಬು ಬೆಳೆಗಾರರು ನಮ್ಮ ದೇಶದಲ್ಲಿ ಅನೇಕ ಕಡೆಗಳಲ್ಲಿ ಕೊಡಬೇಕಾದ ಆರಿಯರ್ಸ್ ಅನೇಕ ಕಡೆ ಇನ್ನೂ ಕೊಟ್ಟಿಲ್ಲ. ಬಂದಂತಹ ಹಣವನ್ನು ಹಲವಾರು ರೀತಿಯಲ್ಲಿ ದುರುಪಯೋಗ ಮಾಡಿಕೊಂಡು ಈ ಕಾರ್ಖಾನೆಗಳನ್ನು ಮುಚ್ಚುವಂತಹ ಪರಿಸ್ಥಿತಿ ಬಂದಿದೆ. ಕಬ್ಬಿನ ಕಾರ್ಖಾನೆಗಳು ಮುಚ್ಚುವ ಅಥವಾ ಮುಚ್ಚಿ ಹಾಕುವಂತಹ ಪರಿಸ್ಥಿತಿ ಇವೊತ್ತು ಬಂದಿದೆ. ಯು. ಪಿ. ನಲ್ಲಿ ಇದೆ ಮಹಾರಾಷ್ಟ್ರದಲ್ಲಿ ಇವೊತ್ತು ಚೆನ್ನಾಗಿ ಕಬ್ಬಿನ ಕಾರ್ಖಾನೆ ಕೋ-ಆಪರೇಟೀವ್ ಸೊಸೈಟಿಯಲ್ಲಿ ನಡೆಯುತ್ತಿದೆ ಎಂದು ಹೇಳಿದ್ದಾರೆ. ನಿಜ, ಸ್ವಲ್ಪ ಮಟ್ಟಿಗೆ ನಡೆಯುತ್ತಿದೆ ಆದರೆ ಬೇರೆ ರಾಜ್ಯಗಳಲ್ಲಿ, ಯು.ಪಿ ಯಲ್ಲಿ ಆಗಲಿ ಬಿಹಾರ್‌ನಲ್ಲಿ ತೆಗೆದುಕೊಂಡರೆ, ಮಹಾರಾಷ್ಟ್ರದಲ್ಲಿ ತೆಗೆದುಕೊಂಡರೆ ಅಥವಾ ನಮ್ಮ ಕರ್ನಾಟಕ ರಾಜ್ಯದಲ್ಲಿ ತೆಗೆದುಕೊಂಡರೆ ಎಲ್ಲಾ ಕಡೆ ಸಹ ಕಬ್ಬಿನ ಕಾರ್ಖಾನೆಗಳಲ್ಲಿ ತೊಂದರೆ ಬಂದಿದೆ, ಇದರಿಂದ ಅವು ಮುಚ್ಚಿ ಹೋಗುವ ಪರಿಸ್ಥಿತಿಗೆ ಬಂದಿದೆ.

ಕಬ್ಬನ್ನು ಬೆಳೆಯುವವರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಕಬ್ಬಿನ ಬೆಲೆಯನ್ನು ಜಾಸ್ತಿ ಮಾಡಿದ್ದೇವೆಂದು ಕೇಂದ್ರಸರ್ಕಾರದವರು ಒಂದು ಕಡೆ ಹೇಳಿ ಮತ್ತೊಂದು ಕಡೆ ಲೆವಿ ಸಕ್ಕರೆ ಬೆಲೆಯನ್ನು ಜಾಸ್ತಿ ಮಾಡಿದ್ದಾರೆ, ಇದನ್ನು ನೋಡಿದಾಗ ಕೇಂದ್ರಸರ್ಕಾರದವರು ಒಂದು ಕಡೆ ರೈತರಿಗೆ ಮತ್ತೊಂದು ಕಡೆ ಜನಸಾಮಾನ್ಯರಿಗೆ ಪಂಚನೆ ಮಾಡುತ್ತಿದ್ದಾರೆಂದು ಹೇಳಬಹುದು. ಕೇಂದ್ರ ಸರ್ಕಾರದವರು ಅಂದರೆ ಶ್ರೀ ರಾಜೀವ್‌ಗಾಂಧಿ ಅವರ ಸರ್ಕಾರದವರು ಸಾಮಾನ್ಯ ಜನರಿಗೆ ಅನುಕೂಲ ಮಾಡುವುದಕ್ಕೆ ಬಂದು ಯಾರು ಸಕ್ಕರೆ ಕಾರ್ಖಾನೆಗಳನ್ನು ನಡೆಸುತ್ತಿದ್ದಾರೆ, ಯಾರು ದೊಡ್ಡ ದೊಡ್ಡ ದೊಡ್ಡ ವ್ಯಾಪಾರಸ್ಥರಿದ್ದಾರೆ,ಯಾರು ಈಗಾಗಲೇ ಕೋಟ್ಯಾಧೀಶ್ವರರಾಗಿದ್ದಾರೆ ಅಂತಹ ದೊಡ್ಡ ದೊಡ್ಡ ಜನರೇ ಕೋಟ್ಯಾಂತರ ರೂಪಾಯಿಗಳಷ್ಟು ಲಾಭ ಮಾಡಿಕೊಳ್ಳಲು ಅವಕಾಶ ಮಾಡಿಕೊಡುತ್ತಿದ್ದಾರೆ. ಈ sugar magnets, sugar barons ಜನರು ಸಿಕ್ಕಾಪಟ್ಟೆ ಹಣ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಈಗಾಗಲೇ ಕೆಲವು ಸಕ್ಕರೆ ಕಾರ್ಖಾನೆಗಳ ಮಾಲೀಕರು ಲೆವಿ ಸಕ್ಕರೆ ಬೆಲೆಯನ್ನು ಕೇಂದ್ರಸರ್ಕಾರದವರು ಜಾಸ್ತಿ ಮಾಡಿದ ಪ್ರಯುಕ್ತ ಮುಕ್ತ ಮಾರುಕಟ್ಟೆಯಲ್ಲಿ ಲೆವಿ ಕೊಟ್ಟ ನಂತರ ಉಳಿದ ಸಕ್ಕರೆಯನ್ನು ಯಾವ ಬೆಲೆಗೆ ಬೇಕಾದರೂ ಮಾರಾಟ ಮಾಡಬಹುದು ಎಂದು ಹೇಳಿಕೊಂಡು ಅದರಂತೆ ಮಾರಾಟ ಮಾಡುತ್ತಿದ್ದಾರೆ. ನಮ್ಮ ದೇಶದಲ್ಲಿ ಸಕ್ಕರೆಯ ಉತ್ಪಾದನೆ

ಸಾಕಷ್ಟು ಪ್ರಮಾಣದಲ್ಲಿ ಆಗುತ್ತಿದೆ ಎಂದು ಕೇಂದ್ರದವರೇ ಹೇಳುತ್ತಿದ್ದರೂ ಸಹ ಜನಸಾಮಾನ್ಯರ ಕೈಗೆ ಪೂರ್ತಿ ಅದು ಕಡಿಮೆ ಬೆಲೆಗೆ ಸಿಗುತ್ತಿಲ್ಲ. ನಮ್ಮ ದೇಶದ ಸಕ್ಕರೆ ಅಮೇರಿಕಾದಲ್ಲಿ ಕೆ.ಜಿ.ಗೆ ಪೈಸೆ ರೂಪಾಯಿಗಳ ಪ್ರಕಾರ ಮಾರಾಟವಾಗುತ್ತಿದ್ದರೆ, ಅದೇ ಸಕ್ಕರೆಗೆ ಇಲ್ಲಿ ಕೆ.ಜಿ.ಗೆ ಸಾಮಾನ್ಯ ಜನರು ೫–೫೦ ಪೈಸೆ ಬೆಲೆ ಕೊಡಬೇಕಾಗಿದೆ. ಇದರಿಂದಲೇ ಇವರ ಎಕಾನಮಿ ಯಾವ ದಾರಿಯಲ್ಲಿ ಹೋಗುತ್ತಿದೆ ಎಂಬುದು ನಮಗೆ ತಿಳಿಯುತ್ತದೆ. ಇದು totally lop-side economy ಎಂದು ಹೇಳಬಹುದು. Totally lopsided economic proposition and policies of Government of India and policies which are in the interest of the monopolies, policies which are in the interest of sugar barons and policies which are in the interest of Tatas, Birlas and such other people. ಈಗ ನಮ್ಮ ದೇಶದಲ್ಲಿ ಯಾರು ಯಾರು ಗುತ್ತೇದಾರಿ ಬಂಡವಾಳಗಾರರು ಮತ್ತು ಕೋಟ್ಯಾಧೀಶ್ವರರು ಇದ್ದಾರೆ ಅಂತಹವರಿಗೆ ಅನುಕೂಲ ಮಾಡಿಕೊಡುವ ಧೋರಣೆಯನ್ನು ಕೇಂದ್ರಸರ್ಕಾರ ಅನುಸರಿಸುತ್ತಿದೆ. ಇದೇ ಕೇಂದ್ರ ಸರ್ಕಾರದವರು ಹೇಳುತ್ತಿರುವ ಸಮಾಜವಾದ. ಇದು ಬರೀ ಪೊಳ್ಳು ಮಾತು. ಇವರು ಹೇಳುತ್ತಿರುವ ಸಮಾಜವಾದದಲ್ಲಿ ಸ್ವಲ್ಪವೂ ನಿಜಾಂಶವಿಲ್ಲ. ಹಿಂದಿನ ಕಾಲದಲ್ಲಿದ್ದಂಥ ಸಮಾಜವಾದ ಈಗ ಇಲ್ಲ. ಅದನ್ನು ಈಗ ಎಲ್ಲರೂ ಮರೆತಿದ್ದಾರೆ. ಈಗ ಎಲ್ಲಾ ವಸ್ತುಗಳ ಬೆಲೆಗಳೂ ಸಹ ಜಾಸ್ತಿ ಆಗುತ್ತವೆ, ಸ್ಟೀಲ್ ಬೆಲೆಯನ್ನು ಜಾಸ್ತಿ ಮಾಡಿದ್ದಾರೆ. ಇದರಿಂದ ಟಿಸ್ಕೋನವರಿಗೆ ಅಂದರೆ ಟಾಟಾ ಐರನ್ ಅಂಡ್ ಸ್ಟೀಲ್ ಕಂಪನಿಯವರಿಗೆ ಅನುಕೂಲವಾಗಿದೆ. ಈ ರೀತಿ ಬೆಲೆಗಳನ್ನು ಹೆಚ್ಚು ಮಾಡಿದ್ದರಿಂದ ಬರುವ ಮಾರ್ಚ್ ಕೊನೆಯವರೆಗೆ ತಮ್ಮ ಕಂಪನಿಗೆ ೩೦ ರಿಂದ ೪೦ ಕೋಟಿ ರೂಪಾಯಿಗಳಷ್ಟು ಹೆಚ್ಚಿನ ಲಾಭ ತಮಗೆ ಬರುತ್ತದೆ ನಂತರ ಒಂದು ವರ್ಷಕ್ಕೆ ೧೦೦ ರಿಂದ ೧೨೦ ಕೋಟಿ ರೂಪಾಯಿಗಳವರೆಗೆ ಲಾಭ ಬರುತ್ತದೆಂದು ರೂಸೀದೋದಿ ಅವರೇ ಒಪ್ಪಿ ಕೊಂಡಿದ್ದಾರೆ. ಆದರೆ ನಾನು ಅವರ ಮಾತನ್ನು ಪೂರ್ತಿಯಾಗಿ ಒಪ್ಪುವುದಿಲ್ಲ. ಅವರಿಗೆ ಒಂದು ವರ್ಷಕ್ಕೆ ಈ ಬೆಲೆಗಳ ಹೆಚ್ಚಳದಿಂದ ೨೧೦ ರಿಂದ ೩೦೦ ಕೋಟಿ ರೂಪಾಯಿಗಳವರೆಗೆ ಲಾಭ ಬರಬಹುದೆಂದು ನನ್ನ ಅಂದಾಜು. ಈ ಲಾಭದ ಜೊತೆಗೆ ಅವರು ಬೇರೆಬೇರೆ ರೀತಿಯ ತೆರಿಗೆಗಳನ್ನು ಕೊಡದೆ ಸರ್ಕಾರಕ್ಕೆ ವಂಚನೆ ಮಾಡುವಂತಹ ಉಪಾಯವನ್ನು ಅವರು ಹುಡುಕುತ್ತಿದ್ದಾರೆ. ಒಟ್ಟಿನಲ್ಲಿ ಈ ಬೆಲೆಗಳ ಹೆಚ್ಚಳದಿಂದ ರೂಸಿಮೋದಿ, ಟಾಟಾ, ಬಿರ್ಲಾ ಸಿಂಘಾನಿ ಮುಂತಾದವರು ಕೋಟ್ಯಾಂತರ ರೂಪಾಯಿಗಳಷ್ಟು ಲಾಭ ಮಾಡಿಕೊಳ್ಳುವುದಕ್ಕೆ ಕೇಂದ್ರಸರ್ಕಾರದವರು ಅವಕಾಶ ಮಾಡಿಕೊಟ್ಟಿದ್ದಾರೆ. ಸ್ಟೀಲ್ ಅಥಾರಿಟಿಯಲ್ಲಿ ಜಾಯಿಂಟ್ ಪ್ಲಾನ್ ಕಮಿಟಿ ಎಂಬುದು ಇದೆ. ದೀಪಕ್‌ಘೋಷ್ ಎಂಬುವರು ಇದರ ಅಧ್ಯಕ್ಷರು. ಬಹಳ ಹೆಚ್ಚು ಅನುಭವವಿರುವಂತಹ ಇವರು ಈ ಬೆಲೆಗಳ ಹೆಚ್ಚಳದ ಬಗ್ಗೆ ಏನು ಹೇಳಿದ್ದಾರೆಂದರೆ, it has become a bonaza.....ಎಂದು ಹೇಳಿದ್ದಾರೆ. ಈ ಉಕ್ಕನ್ನು ಅಂದರೆ ಸ್ಟೀಲ್‌ನ್ನು ತಯಾರು ಮಾಡಲು ಬೇಕಾದಂಥ ರಾ–ಮೇಟೀರಿಯಲ್ಸ್‌ನ ಬೆಲೆ ೧೯೬೫ ರಿಂದ ಜಾಸ್ತಿ ಆಗುತ್ತಾ ಬಂದಿದೆ, ಇದರ ಜೊತೆಗೆ ಕಲ್ಲಿದ್ದಲ ಬೆಲೆ ಮತ್ತು ವಿದ್ಯುತ್ ಬೆಲೆ ಜಾಸ್ತಿ ಆಗಿದೆ, ಈ ರೀತಿ ಬೆಲೆಗಳ ಹೆಚ್ಚಳದಿಂದ ಇಲ್ಲಿಯವರೆಗೆ ಆದಂಥ ನಷ್ಟವನ್ನೆಲ್ಲಾ ಕಳೆದುಕೊಂಡು ಜಾಸ್ತಿ ಲಾಭ ಮಾಡಿಕೊಳ್ಳುವುದಕ್ಕೆ ಸ್ಟೀಲ್ ಬೆಲೆ ಹೆಚ್ಚಳದಿಂದ ಅವಕಾಶ ಆಗಿದೆ ಎಂದು ಇದೇ ದೀಪಕ್ ಘೋಷ್‌ಅವರು ಹೇಳಿದ್ದಾರೆ.

೧–೦೦ ಪಿ. ಎಂ.

ಇನ್ನೊಂದು ಮಾತು ಏನು ಹೇಳಿದ್ದಾರೆಂದರೆ, ಹಿಂದೆ ೧೯೬೫ರಲ್ಲಿ ಮಾಡಿದಂಥ ಬೆಲೆ ಅಡ್ಜಸ್ಟ್‌ಮೆಂಟ್ ಫ್ಯಾಕ್ಟರ್ ಇನ್‌ಕ್ರೀಸ್‌ಗೆ ಅನುಕೂಲವಾಯಿತು. ಮತ್ತೆ ಪುನ: ಈಗ ಏನು ಮಾಡಿದ್ದಾರೆ ಅದರಿಂದ ಪುನ: ಬೆಲೆಗಳು ಜಾಸ್ತಿಯಾಗಬಹುದು, ಹಾಗೆ ಆಯಿತು. ಅಂದರೆ ನಾವು ಪುನ: ಸ್ಟೀಲ್ ಪ್ರೈಸ್ ಜಾಸ್ತಿ ಮಾಡಬೇಕಾಗಿ ಬರಬಹುದು ಎಂದು ಹೇಳಿದ್ದಾರೆ. ಶ್ರೀಮಾನ್ ರಾಜೀವ್‌ಗಾಂಧಿಯವರ ಡಿಸ್ಪೆನ್ಸೇಷನ್ ಏನು ಬಂದಿದೆ, ಏನು ಜಾಸ್ತಿ ಮಾಡಿದ್ದಾರೆ ಅದಕ್ಕಿಂತ ಇನ್ನೂ ಹೆಚ್ಚು ಜಾಸ್ತಿ ಮಾಡುವಂಥ ಪರಿಸ್ಥಿತಿ ನಮ್ಮ ದೇಶದಲ್ಲಿ ಬರುತ್ತದೆ, ಜನಗಳ ಮೇಲೆ ಬರುತ್ತದೆ, ಈ ಗಂಡಾಂತರ ಇದ್ದೇ ಇದೆ. ಇದರ ಎಫೆಕ್ಟ್ ಜನಸಾಮಾನ್ಯರ ಮೇಲೆ ಮತ್ತೆ ಬರಬಹುದೆಂದು ಎಂದು ಸ್ಪಷ್ಟವಾಗಿ ಹೇಳಬಹುದು. ಸ್ಟೀಲ್ ಆಗಲಿ, ಕೋಲ್ ಆಗಲಿ, ಪೆಟ್ರೋಲಿಯಂ ಆಗಲಿ, ಪಾಪೊಲಿನ್ ಆಗಲೀ, ವೈಟಲ್ ಡ್ರಗ್ಸ್

ಆಗಲಿ ಇವುಗಳ ಬೆಲೆ ಜಾಸ್ತಿಯಾದರೆ ಅದೆಲ್ಲಾ ಜನಸಾಮಾನ್ಯರಿಗೆ ಎಫೆಕ್ಟ್ ಆಗುತ್ತದೆ. ಆಮೇಲೆ ನಮ್ಮ ದೇಶದಲ್ಲಿ ಜನಸಾಮಾನ್ಯರಿಗೆ ಬೇಕಾಗಿರುವಂಥ ಔಷಧಿಗಳನ್ನು ಅತಿ ಕಡಿಮೆ ಬೆಲೆಯಲ್ಲಿ ಕೊಡಬೇಕು ಎನ್ನುವ ತತ್ವವನ್ನು ಜವಹರಲಾಲ್ ನೆಹರೂರವರು ಹೇಳಿದರು. ಕೃಷ್ಣಮೆನನ್‌ರವರು ಹೇಳಿದರು. ಅದಕ್ಕೋಸ್ಕರ ಹಾತಿ ಕಮಿಟಿಯನ್ನು ರಚನೆ ಮಾಡಿದರು. ಆ ಕಮಿಟಿಯವರು ಅದರ ಬಗ್ಗೆ ವರದಿ ಕೊಟ್ಟು ಈ ದೇಶದಲ್ಲಿ ಜನಸಾಮಾನ್ಯರಿಗೆ ಔಷಧಿಗಳು ಕಡಿಮೆ ಬೆಲೆಯಲ್ಲಿ ಸಿಗಬೇಕು. ಇವತ್ತು ಯಾರಿಯಾರು ಖಾಸಗಿ ಉದ್ದಿಮೆದಾರರು ಇದ್ದಾರೆ, ಖಾಸಗಿ ಡ್ರಗ್ ಮ್ಯಾನುಫ್ಯಾಕ್ಚರರ್ಸ್ ಇದ್ದಾರೆ ಅವರು ಅನೇಕ ರೀತಿಯಲ್ಲಿ ಜನಗಳಿಗೆ ವಂಚನೆ ಮಾಡುತ್ತಾ ಇದ್ದಾರೆ, ಸಬ್‌ಸ್ಟ್ಯಾಂಡರ್ಡ್ ಡ್ರಗ್ಸ್ ಕೊಡುತ್ತಾ ಇದ್ದಾರೆ, ಯಾವುದನ್ನು ಮನುಷ್ಯ ತೆಗೆದುಕೊಂಡರೆ ಸಾಯುತ್ತಾನೋ ಅಂತಹ ಔಷಧಿಗಳನ್ನು ತಯಾರು ಮಾಡುತ್ತಾ ಇದ್ದಾರೆ. ಈರೀತಿಮಾಡಿ ಕೋಟ್ಯಾಂತರ ರೂಪಾಯಿಗಳನ್ನು ಪಡಾಡಿ ಕೊಳ್ಳುತ್ತಾ ಇದ್ದಾರೆ ಅದುದರಿಂದ ಕ್ವಾಲಿಟಿ ಕಡೆ ಗವನಕೊಡಬೇಕು ಎಂದು ಹೇಳಿದರು. ಆ ಕಮಿಟಿಯವರು ತಮ್ಮ ರೆಕಮೆಂಡೇಷನ್ ನಲ್ಲಿ Drugs and Pharmaceuticals industries must be nationalised. ರಾಷ್ಟ್ರೀಕರಣ ಮಾಡಬೇಕೂ ಎಂದೂ ಹೇಳಿದರು. ಜನತೆಯ ಹಿತ ದೃಷ್ಟಿಯಿಂದ ಈ ಕೈಗಾರಿಕೆಯನ್ನು ರಾಷ್ಟ್ರೀಕರಣ ಮಾಡಬೇಕು ಎಂದು ಸ್ಪಷ್ಟವಾಗಿ ಹೇಳಿದರು ರಾಷ್ಟ್ರೀಕರಣ ಎಂದು ಹೇಳಿದಾಕ್ಷಣ ಕೆಲವರಿಗೆಲ್ಲಾಕೋಪ ಬರುತ್ತದೆ. ಇಲ್ಲಿ ಇರತಕ್ಕಂಥ ಸಚಿವರಿಗೆ ಮಾತ್ರ ಕೋಪ ಬರುವುದಿಲ್ಲ. ಅವರೂ ಸೋಷಲಿಸ್ಟ್ ಪಕ್ಷದವರೂ. ಬೇರೆಯವರಿಗೆಲ್ಲಾ ಕೋಪ ಬರುತ್ತದೆ. ರಾಷ್ಟ್ರೀಕರಣ ಸಂಸ್ಥೆಗಳು ನಷ್ಟದಲ್ಲಿವೆ, ರಾಷ್ಟ್ರೀಕರಣಮಾಡಿ ಪ್ರಯೋಜನವಿಲ್ಲ ಎನ್ನುವ ಅಭಿಪ್ರಾಯಂ ಮೂಡಿಸಿ, ದೇಶದಲ್ಲಿ ರಾಷ್ಟ್ರೀಕರಣಕ್ಕೆ ವಿರುದ್ಧವಾಗಿ ಬಹಳ ದೊಡ್ಡ ಲಾಬಿಯನ್ನು ಕ್ರಿಯೇಟ್‌ಮಾಡಿ ಬಂಡವಾಳಗಾರರೆಲ್ಲರೂ ಮುಂದು ವರಿಯುತ್ತಾ ಇದ್ದಾರೆ. ಅದರಲ್ಲೂ ಟಾಟಾ, ಬಿರ್ಲಾ ಮುಂದುವರಿಯುತ್ತಾ ಇದ್ದಾರೆ. ಡೆಲ್ಲಿಗೆ ಹೋಗಿ ಅಲ್ಲಿ ಲಾಬಿ ಇದೆ, ಕರ್ನಾಟಕಕ್ಕೆ ಬನ್ನಿ, ಇಲ್ಲಿ ಬಂದರೆ ಲಾಬಿ ಇದೆ, ತಮಿಳುನಾಡಿಗೆ ಹೋದರೆ ಅಲ್ಲಿ ಲಾಬಿ ಇದೆ, ಭಾರಿ ದೊಡ್ಡ ಲಾಬಿ ಇದೆ, ರಾಷ್ಟ್ರೀಕರಣ ಆಗಕೂಡದು ಎಂದು. ರಾಷ್ಟ್ರೀಕರಣ ಆಗಬೇಕು, ಅದರಲ್ಲೂ ವೈಟಲ್ ಇಂಡಸ್ಟ್ರೀಸ್ ಇನ್ನೂ ಹೆಚ್ಚಿಗೆ ರಾಷ್ಟ್ರೀಕರಣ ಆಗಬೇಕು ಎನ್ನುವುದು ನಮ್ಮ ಅಭಿಪ್ರಾಯ. ಇವತ್ತು ಕೆಲವು ಕೈಗಾರಿಕೆಗಳು ಸರಿಯಾಗಿ ನಡೆಯುತ್ತಿಲ್ಲ ಎನ್ನುವುದು ನಿಜ. ಲಾಸ್‌ನಲ್ಲಿ ನಡೆಯುತ್ತಿವೆ ಎನ್ನುವುದನ್ನು ಒಪ್ಪಿಕೊಳ್ಳಕ್ಕೇನೆ, ಎಲ್ಲಾ ಕೈಗಾರಿಕೆಗಳಲ್ಲಿ. ೬ ತಿಂಗಳ ಹಿಂದೆ ಕೇಂದ್ರ ಸರ್ಕಾರದ ಬ್ಯೂರೊ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್‌ನವರು ಸುಮಾರು ೧೨ ದೊಡ್ಡ ದೊಡ್ಡ ಕೈಗಾರಿಕೆಗಳು, ಫುಸ ಕೈಗಾರಿಕೆಗಳು. ಸಾರ್ವಜನಿಕರ ಕ್ಷೇತ್ರದ ಕೈಗಾರಿಕೆಗಳ ಬಗ್ಗೆ ಒಂದು ವರದಿಯನ್ನು ಸಲ್ಲಿಸಿ ಫೈನಲ್‌ನಲ್ಲಿ ಕನ್‌ಕ್ಲೂಷನ್‌ಗೆ ಬಂದಿದ್ದಾರೆ. ಅದರಲ್ಲಿ ಇಂತಿಂಥ ಕಡೆ ಲಾಸ್ ಆಗಿದೆ, ಇಂತಿಂಥ ಕಡೆ ಪ್ರಾಫಿಟ್ ಮಾಡಿದೆ ಎಂದು ಒಂದೊಂದಾಗಿ ಅನಲೈಸ್‌ಮಾಡಿ ಕಡೆಯಲ್ಲಿ ಏನು ಹೇಳಿದ್ದಾರೆಂದರೆ, "Public sector is growing public sector is looking up, public sector has the possiblity to looking up, public sector must be expanded even in consumer industries". ಎಂದು ಹೇಳಿದ್ದಾರೆ. ಇದು ಅವರ ಅಭಿಪ್ರಾಯ. ಈ ಅಭಿಪ್ರಾಯಕ್ಕೆ ತದ್ವಿರುದ್ಧವಾಗಿ ಮಾನ್ಯ ರಾಜೀವಗಾಂಧಿಯವರು ನಮ್ಮ ದೇಶದ ತತ್ವಗಳಿಗೆ ತಿಲಾಂಜಲಿ ಕೊಡುವಂಥ ಮಾತನಾಡಿದ್ದಾರೆ. ನಿನ್ನೆ ಮಾನ್ಯ ರಮೇಶ್ ಕುಮಾರ್‌ರವರು ಬಹಳ ಚೆನ್ನಾಗಿ ಹೇಳಿದರು. ರಾಜೀವಗಾಂಧಿಯವರು ವಂದ್ರಾಸಿಗೆ ಬಂದಾಗ, ಪಬ್ಲಿಕ್ ಸೆಕ್ಟಾರ್, ಎಲ್ಲಾ ತಿಂದು ಹಾಕುತ್ತಿದೆ, ನಮ್ಮ ದೇಶದ ವರಮಾನ, ಸಂಪನ್ಮೂ ಲಗಳನ್ನೂ ತಿಂದು ಹಾಕುತ್ತಿದೆ, ಇದು ಜನಗಳಿಗೆ ಶತ್ರು ಎನ್ನುವ ರೀತಿಯಲ್ಲಿ ಮಾತನಾಡಿದರು ಇದು ಖಂಡನೆ ಮಾಡ ಬೇಕಾದಂಥ ಮಾತು. ಇದನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ. ಯಾರು ನಮ್ಮ ದೇಶ ತನ್ನ ಕಾಲಮೇಲೆ ನಿಂತುಕೊಳ್ಳಬೇಕು ಎನ್ನುವ ಅಭಿಪ್ರಾಯ ಇಟ್ಟುಕೊಂಡಿದ್ದಾರೋ, ಸಾಮ್ರಾಜ್ಯಶಾಹಿಗಳ ಹಿಡಿತಕ್ಕೆ ಹೋಗಕೂಡದು ಎನ್ನುವ ಅಭಿಪ್ರಾಯ ಇಟ್ಟುಕೊಂಡಿದ್ದಾರೋ ಅಂತಹವರು ಯಾರೂ ಪಬ್ಲಿಕ್ ಸೆಕ್ಟಾರ್ ಇರಕೂಡದು ಎಂದು ಹೇಳುವುದಿಲ್ಲ.

ಮುಖ್ಯವಾಗಿ ಪಂಡಿತ್ ನೆಹರೂರವರು ಇದ್ದಾಗ ಪಬ್ಲಿಕ್ ಸೆಕ್ಟಾರ್ ಬೇಕೇ ಬೇಡವೇ ಎನ್ನುವ ಬಗ್ಗೆ ಡಿಬೇಟ್ ನಡೆದಿದೆ. ಯಾವ ಕ್ಷೇತ್ರವನ್ನು ಬೆಳೆಸಬೇಕೆಂಬ ಚರ್ಚೆ ನಡೆದಾಗ ಅತಿ ಮುಖ್ಯವಾಗಿ ಪಬ್ಲಿಕ್ ಸೆಕ್ಟಾರ್ ಬೆಳೆಯಬೇಕು, ನಮ್ಮ ಕಾಲ ಮೇಲೆ ನಾವು ನಿಲ್ಲಬೇಕು, ಪರದೇಶದಿಂದ ಕೈಗಾರಿಕೆ ಗಳನ್ನು ಇಲ್ಲಿ ತರುವುದಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ. ವಿದೇಶದಿಂದ ಸಾಮಗ್ರಿಗಳನ್ನು ಆಮದು

ಮಾಡಿಕೊಳ್ಳುವುದು ನಿಲ್ಲಬೇಕು. ನಮ್ಮಲ್ಲಿ ಉತ್ತಮ ತಜ್ಞರು ಇದ್ದಾರೆ, ಇಂಜಿನಿಯರಿಂಗಳು ಇದ್ದಾರೆ, ಕಾರ್ಮಿಕರು ಇದ್ದಾರೆ, ನಮ್ಮ ದೇಶದ ಜನ ಚನ್ನಾಗಿ ಕೆಲಸ ಮಾಡುತ್ತಾರೆ, ವಿದೇಶದಿಂದ ಏತಕ್ಕೆ ತಂತ್ರಜ್ಞಾನವನ್ನು ಪಡೆಯಬೇಕು? ತಂತ್ರಜ್ಞಾನವನ್ನು ಕೊಂಡುಕೊಳ್ಳೋಣ ಆದರೆ, ಅವರಿಂದ ಪಡೆದು ಕೊಳ್ಳುವಂಥ ಪರಿಸ್ಥಿತಿ ಇರಕೂಡದು ಎಂದು ನೆಹರೂ ಅವರು ಹೇಳಿದ್ದಾರೆ. ನಮ್ಮ ದೇಶದ ಹತ್ತಿಯನ್ನು ತೆಗೆದುಕೊಂಡು ಹೋಗಿ ಇಂಗ್ಲೇಂಡ್‌ನ ಮ್ಯಾಂಚಸ್ಟರ್‌ನಿಂದ ಬಟ್ಟೆ ತಯಾರು ಮಾಡಿ, ನಮ್ಮ ದೇಶಕ್ಕೆ ರಫ್ತು ಮಾಡುತ್ತಿದ್ದರು. ಬಟ್ಟೆ ತಯಾರು ಮಾಡುವವರು ಅವರು, ಹತ್ತಿ ಕೊಡುವವರು ನಾವು. ಅದನ್ನು ತಪ್ಪಿಸುವ ಉದ್ದೇಶದಿಂದ ನಮ್ಮಲ್ಲಿ ಟೆಕ್ಸ್‌ಟೈಲ್‌ಮಿಲ್ಸ್ ಬಂತು. ನಮ್ಮಲ್ಲಿ ಹೆಚ್.ಎ.ಎಲ್, ಬಿ.ಇ.ಎಲ್. ರಾಂಚಿಯಲ್ಲಿ ಸ್ಟೀಲ್ ಕಾರ್ಖಾನೆಗಳು ಬಂದು, ಸೆಲ್ಫ್ ರಿಲೀಸ್ ಪಾಲಿಸಿ ಜಾಸ್ತಿಯಾಯಿತು. ಅದು ಜಾಸ್ತಿಯಾದರೆ ದೇಶ ಮುಂದುವರಿಯುತ್ತದೆ. ಎಲ್ಲಾ ಸಂಪನ್ಮೂಲಗಳು ಸರ್ಕಾರಕ್ಕೆ ಹೋಗುತ್ತವೆ, ಇಲ್ಲಿ ಖಾಸಗೀಯವರಿಗೆ ಹೋಗುವುದಿಲ್ಲ ಖಾಸಗೀ ಬಂಡವಾಳಗಾರರಿಗೆ ಅವಕಾಶ ಸಿಕ್ಕಿದರೆ, ತಮಗೆ ಬಂದ ಸಂಪನ್ಮೂಲಗಳಿಂದ ರೇಸ್‌ನಲ್ಲಿ ಜೂಜಾಡುವುದಕ್ಕೆ, ಮತ್ತಿತರ ವ್ಯವಹಾರಗಳಿಗೆ ಬಳಸುತ್ತಾರೆ. ಸರ್ಕಾರಕ್ಕೆ ನೇರವಾಗಿ ಹೋದರೆ, ರಾಜ್ಯದ ರಾಷ್ಟ್ರದ ಅಭಿವೃದ್ಧಿ ಕಾರ್ಯಗಳಿಗೆ ಬಳಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ಪಬ್ಲಿಕ್ ಸೆಕ್ಟಾರ್ ಬೆಳೆಸಬೇಕೆಂದು ನೆಹರೂರವರ ವಾದ ಮಾಡಿ ಪ್ಲಾನಿಂಗ್ ಕಮೀಷನ್‌ನವರನ್ನು ಒಪ್ಪಿಸಿದರು. ಸಾರ್ವಜನಿಕ ಕ್ಷೇತ್ರ ಉಳಿಯಬೇಕು ಸಾಮಾಜಿಕ ನ್ಯಾಯ ದೊರೆಯಬೇಕು. ಇವತ್ತು ಆ ಸಾಮಾಜಿಕ ನ್ಯಾಯ ದೊರೆಯುತ್ತಿಲ್ಲ ಕೋಟ್ಯಾಧಿಪತಿ ಜನಕ್ಕೆ ಕೆಲಸ ಸಿಗುತ್ತಿಲ್ಲ. ಉದ್ಯೋಗಾವಕಾಶ ಜಾಸ್ತಿಯಾಗಬೇಕಾಗಿದೆ. ಯಾವ ಪ್ರದೇಶದಲ್ಲಿ ಕೈಗಾರಿಕೆಗಳು ಬರುತ್ತವೆಯೋ ಅಲ್ಲಿ ಸಂಪತ್ತು ಜಾಸ್ತಿಯಾಗಬೇಕು. ಸಂಪನ್ಮೂಲ ಹೆಚ್ಚುವುದರಿಂದ, ಅಲ್ಲಿ ಸಂಪತ್ತು ಜಾಸ್ತಿಯಾಗುತ್ತದೆ. ಅಲ್ಲಿನ ಜನ ಜೀವನ ಮಟ್ಟ ಜಾಸ್ತಿಯಾಗುತ್ತದೆ. ಆದರಿಂದ ದೇಶ ಅಭಿವೃದ್ಧಿಯಾಗುತ್ತದೆ. ಈ ದೃಷ್ಟಿಯಿಂದಲೂ ಸಾರ್ವಜನಿಕ ಕ್ಷೇತ್ರಗಳು ಬೆಳೆಯಬೇಕು. ಇವತ್ತು ಹೆಚ್.ಎ.ಎಲ್. ನಲ್ಲಿ ೨೨,೦೦೦ ಜನ ಕೆಲಸ ಮಾಡುತ್ತಿದ್ದಾರೆ, ಬಿ.ಇ.ಎಲ್.ನಲ್ಲಿ ೧೩,೦೦೦ ಜನ ಕೆಲಸ ಮಾಡುತ್ತಿದ್ದಾರೆ, ಐ ಟಿ.ಐ. ನಲ್ಲಿ ೨೨,೦೦೦ ಜನ ಕೆಲಸ ಮಾಡುತ್ತಿದ್ದಾರೆ ಅದೇ ಈ ಫ್ಯಾಕ್ಟರಿಗಳನ್ನು ಟಾಟಾರವರೂ ಮಂತ್ತು ಬಿರ್ಲಾ ನವರು ನಡೆಸಿದ್ದರೆ ಏನಾಗಂತ್ತಿತ್ತು. ಕ್ಯಾಪಿಟಲ್ ಇನ್‌ಟೆನ್ಸೀವ್ ಮಾಡಿ, ಲೇಬರ್ ಕಡಿಮೆ ಮಾಡಂತಿದ್ದರು. ಬಂಡವಾಳ ಹೂಡಿ, ಆಧುನಿಕರಣ ಮಾಡಿ, ಲೇಬರ್ ಕಡಿಮೆ, ಸಂಬಳ ಕಡಿಮೆ ಕೊಡುತ್ತಿದ್ದರು. ಸಾಮಾಜಿಕ ನ್ಯಾಯ ದೊರೆಯದಂತೆ ಮಾಡುತ್ತಿದ್ದರು ಇವತ್ತು ಸಾರ್ವಜನಿಕ ಕ್ಷೇತ್ರದಲ್ಲಿ ಹೆಚ್ಚು ಬಂಡವಾಳ ಹೂಡಬೇಕು, ಹೆಚ್ಚು ಜನರಿಗೆ ಕೆಲಸ ಕೊಡಬೇಕು, ನಿರುದ್ಯೋಗ ಸಮಸ್ಯೆ ಬಗೆಹರಿಸಬೇಕು, ಕೆಲಸಗಾರರ ಜೀವನ ಮಟ್ಟ ಉತ್ತಮ ಗೊಳ್ಳಬೇಕು. ಸ್ವಾಮಿ, ಇವತ್ತು ಬಿಲಾಯಿ ಉಕ್ಕಿನ ಕಾರ್ಖಾನೆ ಬಂದಿರುವುದಾದರು ಎಲ್ಲಿ ? ಆದರ ಸುತ್ತಮುತ್ತ ಆದಿವಾಸಿಗಳಿರುವಂಥ ಜಾಗ. ಬೆಂಗಳೂರಿನಂಥ ಜಾಗದಲ್ಲಿ ಅದು ಇಲ್ಲ. ಹಿಂದುಳಿದ ಪ್ರದೇಶ, ತಲೆತಲಾಂತರುಗಳಿಂದ ಶೋಷಣೆಗೆ ಒಳಗಾಗಿ, ತುಳಿತಕ್ಕೆ ಒಳಪಟ್ಟಂಥ ಜನ ಅಲ್ಲಿದ್ದಾರೆ. ಇವತ್ತು ಆ ಕಾರ್ಖಾನೆಯಲ್ಲಿ ಅನೇಕಜನ ಆದಿವಾಸಿಗಳು ಕೆಲಸ ಮಾಡುತ್ತಿದ್ದಾರೆ, ಮೊದಲು ಅವರು ಹೊಂದಿಕೊಂಡಿರಲಿಲ್ಲ. ಇವತ್ತು ಹೊಂದಿಕೊಂಡು ಕೆಲಸ ಮಾಡುತ್ತಿದ್ದಾರೆ. ಅದೇರೀತಿ ಬೊಕಾರೋ ಉಕ್ಕಿನ ಖಾರ್ಕಾನೆ ಬಂದಿದೆ. ಎಲ್ಲೆಲ್ಲಿ ಕೈಗಾರಿಕೆಗಳು ಬಂದಿವೆಯೋ ಅಲ್ಲಲ್ಲಿ ಜನರ ಆರ್ಥಿಕ ಪರಿಸ್ಥಿತಿ ಸುಧಾರಿಸುವುದಕ್ಕೆ ಸಾಧ್ಯವಾಗಿದೆ. ಆ ದೃಷ್ಟಿಯಿಂದ ಕೈಗಾರಿಕೆಗಳನ್ನು ರಾಷ್ಟ್ರೀಕರಣ ಮಾಡಬೇಕಾಗಿದೆ. ರಾಷ್ಟ್ರೀಕರಣದ ಮೂಲ ತಿರುಳು ಇದು. ರಾಷ್ಟ್ರೀಕರಣ ಬೇಡ ಏನ್ನುವ ಜನ ಈ ದೇಶದಲ್ಲಿ ವಾಸ ಮಾಡುವುದಕ್ಕೆ ಸರಿಯೇ ಎಂದು ಯೋಚನೆ ಮಾಡಬೇಕಾಗಿದೆ. ಅವರನ್ನು ಅಮೇರಿಕಕ್ಕೆ ಕಳುಹಿಸಿದರೆ ಒಳ್ಳೆಯದೂ ಎಂದು ನನ್ನ ಅಭಿಪ್ರಾಯ. ಅದೇ ಸಮಯಕ್ಕೆ ರಾಷ್ಟ್ರೀಕೃತವಾಗಿರತಕ್ಕ ಕೈಗಾರಿಕೆಗಳನ್ನು ಲಾಭದಾಯಕವಾಗಿ ನಡೆಸಬೇಕು. ಆದರ ಬಗ್ಗೆ ನೀವು ಸೂಕ್ತ ತಿದ್ದುಪಡಿ ತನ್ನಿ ಆಗ ಖಂಡಿತ ಸಾಧ್ಯವಾಗುತ್ತದೆ. ಕಾರ್ಮಿಕರ ಸಹಕಾರ ಪಡೆದರೆ ಖಂಡಿತ ಸಾಧ್ಯವಾಗುತ್ತದೆ ಯಾವ ಫ್ಯಾಕ್ಟರಿಗಳು ಮುಚ್ಚುವುದಿಲ್ಲ, ಎಲ್ಲಾ ಫ್ಯಾಕ್ಟರಿಗಳನ್ನು ಮುಂದುವರಿಸಲಿಕ್ಕೆ ಸಾಧ್ಯವಾಗುತ್ತದೆ. ಎಲ್ಲೆಲ್ಲಿ ಕಾರ್ಮಿಕರ ಸಹಕಾರ ಪಡೆದಿದ್ದಾರೆ ಅಲ್ಲೆಲ್ಲಾ ಉತ್ಪಾದನೆ ಜಾಸ್ತಿಯಾಗಿದೆ. ನಾನು ನಮಗೆ ಸ್ವಂತ ನಿದರ್ಶನ ಹೇಳಬೇಕೆಂದರೆ, ಹಿಂದೂಸ್ತಾನ್ ಮೆಷಿನ್ ಟೂಲ್ಸ್‌ನಲ್ಲಿ ಅಲ್ಲಿ ನಾನು ಸಂಘದ ಅಧ್ಯಕ್ಷನಾಗಿದೆ . ೧೯೫೧ನೇ ಇಸವಿಯಲ್ಲಿ ಮಂಕಮಲ್ಲಾ ಎನ್ನುವವರು ಒಬ್ಬರು ಡೈರೆಕ್ಟರ್ ಆಗಿದ್ದರು ಒಂದು ತಿಂಗಳಿಗೆ ಬೆಂಗಳೂರು ಎಚ್‌ಎಂಟಿ ಯಲ್ಲಿ ಆಗ ೩೩ ಮೆಷಿನ್ಸ್ ಮಾತ್ರ ತಯಾರು ಮಾಡುತ್ತಿದ್ದರು. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್

ಸೈನ್ಸ್‌ಗೆ ಸಂಬಂಧಪಟ್ಟ ಫಂಕ್ಷನ್‌ಗೆ ಭಾಗವಹಿಸಲಿಕ್ಕೆ ಜವಹರ್‌ಲಾಲ್ ನೆಹರೂ ಅವರೂ ಬೆಂಗಳೂರಿಗೆ ಭೇಟಿ ಕೊಡುತ್ತಿದ್ದಾರೆ ಎನ್ನುವಂಥ ವಿಚಾರ ತಿಳಿದುಬಂತು. ಈಗ ಮಂತ್ರಿಗಳಾಗಿರತಕ್ಕ ಮಾನ್ಯರಾದ ನಿಯೋಗದವರಿಗೂ ಸಹ ಈ ವಿಚಾರ ಗೊತ್ತಿದೆ. ಅವರು ಕೂಡ ಹೆಚ್.ಎಂ.ಟಿ ಯಲ್ಲಿ ಇದ್ದವರು ನಾನು ಅವರನ್ನು ಶ್ಲಾಘಿಸುತ್ತೇನೆ ಮತ್ತು ಅಭಿನಂದಿಸುತ್ತೇನೆ ನೆಹರೂ ಅವರು ಬಂದಾಗ ಸಿಪಿ ಮೇಷಿನ್ಸ್ ಜಾಸ್ತಿ ಮಾಡಿ ಎಂದು ಹೇಳಿದರು. ಹೆಚ್.ಎಂ.ಟಿ. ಯಲ್ಲಿ ಆಗುವುದಿಲ್ಲ ಎನ್ನುವ ಅಭಿಪ್ರಾಯವನ್ನು ಅಧಿಕಾರಿಗಳು ಹೇಳಿದರು. ಆಲ್ಲಿ ರೋಸ್ ಗಾರ್ಡನ್ ಮಾತ್ರ ಮಾಡಿಕೊಂಡು ಇಟ್ಟುಕೊಂಡಿದ್ದರಂ ಆಗ ನಮ್ಮನ್ನು ಎಷ್ಟೋ ಜನ ಹೀಯಾಳಿಸಿದರು ಜಾಯಿಂಟ್ ಮ್ಯಾನೇಜ್‌ಮೆಂಟ್ ಕೌನ್ಸಿಲ್‌ನಲ್ಲಿ ಮಾನಿಯಿಪ್ಪನವರು ಇದ್ದರು ನಾನು ವೈಸ್ ಛೇರ್‌ಮನ್ ಆಗಿದೆ. ಆಲ್ಲಿ ಚರ್ಚೆ ಮಾಡಿದ ಮೇಲೆ ಸಿಪಿ ಮೇಷಿನ್ ಆಲ್ಲಿ ಇನ್ನೂ ಜಾಸ್ತಿ ಕೊಡುತ್ತೇವೆ ನಮಗೆ ಬೇಕಾದಂಥ ಅನುಕೂಲಗಳು ಎಂದರೆ ಪೆಂಟೀರಿಯಲ್ಸ್ ಹ್ಯಾಂಡ್ಲಿಂಗ್, ಪ್ರೊಡೆಕ್ಷನ್ ಪ್ರೊಸೆಸ್ ಕೊಟ್ಟರೆ ಪ್ರೊಡೆಕ್ಷನ್ ಬಗ್ಗೆ ಮಾಡುತ್ತೇವೆಂದು ಹೇಳಿ ಕಮಿಟಿಯಲ್ಲಿ ಚರ್ಚೆ ಮಾಡಿದೆವು ನಂತರ ಜನರಲ್ ಬಾಡಿಯಲ್ಲಿಯೂ ಅದನ್ನು ಇಟ್ಟಿದ್ದೆವು. ಆ ಸಂದರ್ಭದಲ್ಲಿ ಮ್ಯಾನೇಜ್‌ಮೆಂಟಿನವರು ಸಿಪಿ ಮೇಷಿನ್ ಕೊಟ್ಟರೆ ಸಾಕು ಎಂದು ಹೇಳಿದರು. ನೆಹರೂ ಬಂಗಮೇಲೆ ಸುಮಾರು ೮೦ ಮೆಷಿನ್ ಕೊಟ್ಟರು, ಆ ಸಂದರ್ಭದಲ್ಲಿ ನೆಹರೂರವರು ಮತ್ತು ಜಯಚಾಮರಾಜೇಂದ್ರ ಒಡೆಯರ್ ಅವರು ಹೆಚ್‌ಎಂಟಿಗೆ ಬಂದು ಕಾರ್ಮಿಕರನ್ನು ಶ್ಲಾಘಿಸಿ ಬಹಳ ಒಳ್ಳೆಯ ಕೆಲಸ ಮಾಡಿದ್ದೀರಿ ಎಂದು ಹೇಳಿದರು ವರ್ಕರ್ಸ್ ಪಾರ್ಟಿಸಿಪೇಷನ್ ಮ್ಯಾನೇಜ್‌ಮೆಂಟ್ ಇದು ಮೊದಲನೆಯ ಹಂತ ಅಲ್ಲಿಯೂ ಸಹ ಎಷ್ಟೋ ನ್ಯೂನತೆಗಳು ಇರಬಹುದು. ಕರ್ನಾಟಕದ ಕಾರ್ಮಿಕರು ಶ್ಲಾಘನೆಗೆ ಪಾತ್ರರಾಗಿದ್ದಾರೆ, ಆವರನ್ನು ತೆಗಳುವುದು ಸರಿಯಲ್ಲ, ಆದ್ದರಿಂದ, ಕಾರ್ಮಿಕರ ಸಹಕಾರ ಪಡೆದರೆ, ಅದು ಪಬ್ಲಿಕ್ ಸೆಕ್ಟಾರ್ ಇರಲಿ, ಆಥವಾ ಕೇಂದ್ರದ ಸಾರ್ವಜನಿಕ ಕ್ಷೇತ್ರದಲ್ಲಿ ಇರಲಿ, ಪ್ರೊಡಕ್ಷನ್ ಹೆಚ್ಚು ಮಾಡಲಿಕ್ಕೆ ಸಾಧ್ಯ ಇದೆ. ಆ ರೀತಿಯಲ್ಲಿ ಮಾಡಿ ತೋರಿಸಿಕೊಟ್ಟಿದ್ದಾರೆ. ತಾವು ಪ್ರೈಸಸ್‌ಗೂ ಪಬ್ಲಿಕ್ ಸೆಕ್ಟಾರ್‌ಗೂ ಏನು ಸಂಬಂಧ ಎಂದು ಕೇಳಬಹುದಂ, ಸಂಬಂಧ ಇದೆ, ಈ ಅಡ್ಮಿನಿಸ್ಟರ್ಡ್ ಪ್ರೈಸ್ ಸ್ಟೀಲ್, ಕೋಲ್ ಮತ್ತು ಡ್ರಗ್ಸ್ ಮೇಲೆ ಏತಕ್ಕೆ ಮಾಡಬೇಕಾಗಿತ್ತು? ಶುಗರ್ ಇಂಡಸ್ಟ್ರಿ ಖಾಸಗಿಯವರ ಕೈಯಲ್ಲಿ ಇದೆ, ಆದರೆ ಈ ಮೂರಕ್ಕೂ ಮಾಡಬೇಕಾಗಿರಲಿಲ್ಲ. ಸರಿಯಾದ ರೀತಿಯಲ್ಲಿ ಕಾರ್ಖಾನೆಗಳು ನಡೆದುಕೊಂಡಿದ್ದರೆ. ಮ್ಯಾನೇಜೀರಿಯಲ್ ಫಂಕ್ಷನ್ ಮತ್ತು ಬೇರೆ ರೀತಿಯಲ್ಲಿ ಸೋರಿ ಹೋಗುತ್ತಿರುವ ಹಣವನ್ನು ಬಿಗಿಮಾಡಿದ್ದರೆ, ಕಾರ್ಮಿಕರ ಸಹಕಾರ ಪಡೆದಿದ್ದರೆ ಖಂಡಿತವಾಗಿಯೂ ಸಹ ಅಡ್ಮಿನಿಸ್ಟರ್ಡ್ ಪ್ರೈಸ್‌ನ್ನು ಜಾಸ್ತಿಮಾಡಬೇಕಾಗಿರಲಿಲ್ಲ. ಆದರೆ ಆ ರೀತಿಯ ಮನೋಭಾವ ಕೇಂದ್ರಸರ್ಕಾರಕ್ಕೆ ಇಲ್ಲದೇ ಇರುವುದರಿಂದ ಇದು ನಡೆದುಕೊಂಡು ಬಂದಿದೆ. ಆದ್ದರಿಂದ, ಈ ಬೆಲೆಗಳು ಜಾಸ್ತಿಯಾಗಿವೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಷ್ಟ ಪಡುತ್ತೇನೆ. ಇವೊತ್ತು ಈ ಒಂದು ಆಧಾರದ ಮೇಲೆ ನೋಡುವುದಕ್ಕೆ ಹೋದರೆ, ಡ್ರಗ್ಸ್ ಪ್ರೈಸಸ್ ಜಾಸ್ತಿ ಮಾಡಿದ್ದಾರೆ ಕೇಂದ್ರ ಸರ್ಕಾರದವರು ಹಾತಿ ಕಮಿಟಿ ರೆಕಮಂಡೇಷನ್ ಇಂಪ್ಲಿಮೆಂಟ್ ಮಾಡಿಲ್ಲ. ಯಾರು ಈ ಹಾತಿ ಕಮಿಟಿಯನ್ನು ರಚನೆ ಮಾಡಿದರೋ ಅವರೇ ಅದರ ರೆಕಮಂಡೇಷನ್ ಇಂಪ್ಲಿಮೆಂಟ್ ಮಾಡದೇ ಹೋದರೆ ಜನರಿಗೆ ಯಾವರೀತಿ ನಂಬಿಕೆ ಬರುತ್ತದೆ.

ಸರ್ಕಾರ ಕೆಲವು ಕಾರಣಗಳಿಗಾಗಿ ಒಂದು ಸಮಿತಿಯನ್ನು ರಚನೆ ಮಾಡುತ್ತದೆ. ಪಾರ್ಲಿಮೆಂಟ್‌ನಲ್ಲಿ ಇದು ಚರ್ಚೆಯಾಗಿರುತ್ತದೆ. ಆ ಸಮಿತಿಯವರು ರೆಕ್‌ಮೆಂಡೇಷನ್‌ನ್ನು ಕೊಡುತ್ತಾರೆ. ಆ ಸಮಿತಿಯವರು ಕೊಟ್ಟಂಥ ರೆಕಮೆಂಡೇಷನ್ಸ್‌ನ್ನು ನಾವು ಒಪ್ಪುವುದಕ್ಕಾಗುವುದಿಲ್ಲ ಎಂದು ಇವರೇ ಹೇಳುತ್ತಾರೆ. ಅಸೆಂಬ್ಲಿಯಲ್ಲಿ ಈ ರೆಕಮೆಂಡೇಷನ್ಸ್‌ನ್ನು ಒಪ್ಪುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ ಷುಗರ್ ಇಂಡಸ್ಟ್ರೀಸ್ ಮಸ್ಟ್ ಬಿ ನ್ಯಾಷನಲೈಸ್ಡ್ ಎಂದು ಯು.ಜಿ. ಅಸೆಂಬ್ಲಿಯಲ್ಲಿ ತೀರ್ಮಾನ ಮಾಡಿದರು. ಕಾರಣ ಸಕ್ಕರೆಯನ್ನು ಕಡಿಮೆ ಬೆಲೆಗೆ ಕೊಡುವುದಕ್ಕೆ ಸಾಧ್ಯವಾಗುತ್ತದೆಂದು. ಇಲ್ಲಿ ಏನಾಗಿದೆ ಷುಗರ್ ಪಾಲಿಟಿಕ್ಸ್ ಒಂದು ಪಾಲಿಟಿಕ್ಸ್ ಮಧ್ಯಪ್ರದೇಶದಲ್ಲಿ ಹೇಗೆ ಷುಗರ್ ಪಾಲಿಟಿಕ್ಸ್ ಇದೇರೀತಿ ನಮ್ಮ ರಾಜ್ಯದಲ್ಲೂ ಷುಗರ್ ಪಾಲಿಟಿಕ್ಸ್ ಇದೆ. ಕೋ–ಆಪರೇಟಿವ್ ಸೊಸೈಟೀಸ್‌ನವರೇ ರಾಜರು, ಆವರೇ ಮಹಾರಾಜರು. ಅವರು ನಡೆಸಿದಂತೆ ನಡೆದುಕೊಂಡು ಹೋಗುತ್ತದೆ. ಆದರೆ ನಾನು ಈಗ ಆ ವಿವರಗಳಿಗೆ ಈಗ ಹೋಗುವುದಿಲ್ಲ- ನನಗೆ ಕೆಲವು ವಿವರಗಳೆಲ್ಲಾ ಗೊತ್ತಿದೆ. ಸ್ವಾಮಿ, ಮಹಾರಾಷ್ಟ್ರದಲ್ಲಿ ಏನಾಯಿತು ? ಒಂದುಸಾರಿ ಕಾಂಗ್ರೆಸ್‌ಪಕ್ಷದ ಒಬ್ಬ ಷುಗರ್ ಬ್ಯಾರನ್‌ರವರ ಮಗಳ ಮದಂವೆ ನಡೆಯಿತು. ಅವರು ಎಲ್ಲರನ್ನು ಕರೆಯಿಸಿಬಿಟ್ಟರು. ಆವರ ಕಾನ್‌ಸ್ಟಿಟ್ಯೂಯನ್ಸಿಯಲ್ಲಿದ್ದ ಎಲ್ಲಾ ಜನರನ್ನೂ ಊಟಕ್ಕೆ ಕರೆಯಿಸಿದರು. ಲಕ್ಷಾಂತರ ಜನ ಬಂದು ಊಟ ಮಾಡಿಕೊಂಡು

ಹೋದರು. ಆ ವ್ಯಕ್ತಿ ಮೊದಲು ಸಾಮಾನ್ಯ ಜನ ಆಯಿತು. ಎಲೆಕ್ಷನ್ ಆಗುವುದಕ್ಕೆ ಮುಂಚೆ. ಅಥವಾ ಅವರು ಎಂ.ಎಲ್.ಎ. ಆಗುವುದಕ್ಕೆ ಮುಂಚೆ ಅವರು ಅಷ್ಟೇನೂ ಆಸ್ತಿವಂತರಾಗಿರಲಿಲ್ಲ. ಅವರು ಮೊದಲು ಷುಗರ್ ಫ್ಯಾಕ್ಟರಿ ಛೇರ್ಮನ್ ಆದರು. ಡೈರೆಕ್ಟರ್ ಆದರು, ನಂತರ ಅವರು ಆಡಿದ್ದೇ ಆಟ. ಇವತ್ತಿನ ದಿವಸ ಆ ಪಕ್ಷದ ವರಿಷ್ಠರನ್ನು ಮಾಡುವುದಂ. ಮಂತ್ರಿಗಳನ್ನು ಮಾಡುವುದು, ಇದಕ್ಕೆಲ್ಲಾ ಪ್ರಭಾವ ಬೀರುವುದು ಅಥವಾ ಬೀರದಿರುವುದು ಎಲ್ಲಾ ಕೂಡ ಆ ವ್ಯಕ್ತಿಯ ಕೈಯಲ್ಲೇ ಇವೆ. ಮೇಕಿಂಗ್ ಅಂಡ್ ಬ್ರೇಕಿಂಗ್ ಎಲ್ಲಾ ಅವರ ಕೈಯಲ್ಲೇ ಇದೆ. ಇದನ್ನು ನೋಡಿದರೆ ಕೇಂದ್ರಸರ್ಕಾರದ ನೀತಿ ಇಂಥವರಿಗೆ ಅನುಕೂಲವಾಗಿದೆ ಎಂದು ಹೇಳಬೇಕಾಗುತ್ತದೆ. ಸ್ವಾಮಿ, ನಾನು ಒಂದು ಮಾತನ್ನು ಕೇಳುತ್ತೇನೆ. ಫಾರ್ಮಾಸ್ಯುಟಿಕಲ್ಸ್, ಟಿಕ್ಸ್‌ಟೈಲ್ಸ್ ಮತ್ತು ಷುಗರ್ ಈ ಮೂರು ಕಂಪನಿಗಳನ್ನು ಕೂಡ ರಾಷ್ಟ್ರೀಕರಣ ಮಾಡಬೇಕು.

ಮಾನ್ಯ ಅಧ್ಯಕ್ಷರೆ. ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗದೆ ಇನ್ನು ಕೇವಲ ೨-೩ ವಿಷಯಗಳನ್ನು ಮಾತ್ರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಪೆಟ್ರೋಲ್ ಬೆಲೆಯನ್ನು ಜಾಸ್ತಿ ಮಾಡುವುದಕ್ಕೆ ಇನ್ನೊಂದು ಕಾರಣವನ್ನು ಕೇಂದ್ರ ಸರ್ಕಾರದವರು ಏನು ಕೊಟ್ಟಿದ್ದಾರೆ.

ಶ್ರೀ ಆರ್. ಎಲ್. ಜಾಲಪ್ಪ. — ಫಾರಿನ್ ಎಕ್ಸ್‌ಛೇಂಜ್ ಉಳಿಯಂತ್ತದೆ...

ಶ್ರೀ ಎಂ. ಎಸ್. ಕೃಷ್ಣನ್.— ಪೆಟ್ರೋಲ್ ಬೆಲೆಯಂನ್ನು ಜಾಸ್ತಿ ಮಾಡಿ, ಕನ್‌ಸಂಷನ್‌ನ್ನು ಕಡಿಮೆ ಮಾಡಬೇಕೆಂದು ಹೇಳಿದ್ದಾರೆ. ನಾನಾದರೂ ಹೇಳುತ್ತೇನೆ, ಇವರು ಹೇಳುವಂತೆ ನಿಜವಾಗಿಯೂ ಕನ್‌ಸಂಷನ್ ಕಡಿಮೆಯಾಗುವುದಿಲ್ಲ. ಕನ್‌ಸಂಷನ್‌ನ್ನು ಕಡಿಮೆ ಮಾಡಬೇಕಾಗಿದ್ದರೆ ಅವರು ಏನು ಮಾಡಬೇಕಾಗಿತ್ತು ಗೊತ್ತೆ ಯಾರ ಮೇಲೆ ಹೆಚ್ಚೋಟಿಯನ್ನು ಇಡಬೇಕಾಗಿತ್ತು ಗೊತ್ತೆ? ಪೆಟ್ರೋಲ್ ಮೇಲಲ್ಲ. ನಿಮ್ಮ ಟೂ ವೀಲರ್ ಮೇಲೆ, ಮಾರುತಿ ಕಾರ್ ಮೇಲೆ, ಕಾಂಟೆಸ್ಸಾ ಮೇಲೆ, ಹಿಂದೂಸ್ಥಾನ್‌ರವರ ಅಂಬಾಸಿಡರ್ ಕಾರ್‌ಗಳ ಮೇಲೆ ಹೆಚ್ಚೋಟಿಯನ್ನು ಇಡಬೇಕಾಗಿತ್ತು. ನಮ್ಮ ದೇಶದ ಜನಗಳಿಗೆ ಮಾರುತಿ ಕಾರ್ ಬೇಕಾಗಿಲ್ಲ, ಕಾಂಟೆಸ್ಸಾ ಕಾರ್ ಬೇಕಾಗಿಲ್ಲ. ೪೬ ಸಾವಿರ ಕಾರ್‌ಗಳನ್ನು ಏನೋ ಒಂದು ವರ್ಷಕ್ಕೆ ಪ್ರೊಡ್ಯೂಸ್ ಮಾಡುತ್ತಿದ್ದವರು ಈಗ ೧ ಲಕ್ಷಕ್ಕಿಂತ ಹೆಚ್ಚು ಕಾರುಗಳನ್ನು ಪ್ರೊಡ್ಯೂಸ್ ಮಾಡುವುದಕ್ಕೆ ಹೊರಟಿದ್ದಾರೆ. ಇದರಿಂದ ಸಾಮಾನ್ಯ ಜನರಿಗೇನೂ ಸಹಾಯವಾಗಿಲ್ಲ. ಸಾಮಾನ್ಯ ಜನರು ಯಾರೂ ಕೂಡ ಕಾಂಟೆಸ್ಸಾ ಕಾರ್‌ನಲ್ಲಾಗಲಿ, ಮಾರುತಿ ಕಾರ್‌ನಲ್ಲಾಗಲಿ ಓಡಾಡುವುದಕ್ಕಾಗುವುದಿಲ್ಲ. ಈ ಬೆಂಗಳೂರಿನಲ್ಲಿರತಕ್ಕ ದೊಡ್ಡ ದೊಡ್ಡ ಕಂಟ್ರಾಕ್ಟರ್‌ಗಳೋ, ಕಾಫಿ ಪ್ಲಾಂಟರ್‌ಗೋ. ಕೆಲವು ಮಂತ್ರಿಗಳೋ ಅಥವಾ ಕೆಲವು ಎಂ.ಎಲ್.ಎ ಗಳೋ ಈ ಮಾರುತಿ ಅಥವಾ ಕಾಂಟೆಸ್ಸಾ ಕಾರ್‌ಗಳಲ್ಲಿ ಓಡಾಡಬಹುದು. ಆದರೆ ಸಾಮಾನ್ಯ ಜನರಿಗೆ ಕಾಂಟೆಸ್ಸಾ, ಮಾರುತಿ ಕಾರುಗಳು ಬೇಕಾಗಿಲ್ಲ. ಜಾಬ್ ಸೈಡೆಡ್ ನಮ್ಮ ದೇಶದಲ್ಲಿ ಏನಾಗಿದೆ ಎಂಬುದನ್ನು ನೋಡಿ.

ಮಾನ್ಯ ಅಧ್ಯಕ್ಷರೆ, ನಾನು ತನ್ನು ಮೂಲಕ ಒಂದು ಮಾತನ್ನು ಹೇಳಬಯಸುತ್ತೇನೆ. ಚೈನಾ ದೇಶದಲ್ಲಿ ಏತಕ್ಕೆ ಇದು ಜಾಸ್ತಿ ಆಗಿಲ್ಲ ? ನಮ್ಮ ದೇಶದಲ್ಲಿ ಏತಕ್ಕೆ ಜಾಸ್ತಿಯಾಗಿದೆ ? ಇದನ್ನು ತಾವು ಯೋಚನೆ ಮಾಡಬೇಕು ? ಸೋವಿಯತ್ ರಷ್ಯಾದಲ್ಲಿರತಕ್ಕ ಪರಿಸ್ಥಿತಿಯನ್ನು ನಾವು ಯೋಚನೆ ಮಾಡಂವ್ದು ಬೇಡ ಬಿಡಿ. ಏಕೆಂದರೆ ಅಲ್ಲಿಯ ಪರಿಸ್ಥಿತಿಯೇ ಬೇರೆ ಇದೆ. ಅಲ್ಲಿ ಆಯಿಲ್ ಪ್ರೊಡಕ್ಷನ್ ಜಾಸ್ತಿ ಇದೆ. They are not dependent upon only OPEC for their oil. ನಮ್ಮಲ್ಲಿ ಪ್ರೊಡಕ್ಷನ್ ಇದ್ದರೂ ಸಹ ನಾವು ಬೇರೆಯವರನ್ನು ಅವಲಂಬಿಸುತ್ತಿದ್ದೇವೆ. ಅಲ್ಲಿ ಏತಕ್ಕೆ ಕಡಿಮೆ, ಇಲ್ಲಿ ಏತಕ್ಕೆ ಜಾಸ್ತಿ ಬೆಲೆ, ಇದರಲ್ಲಿ ಆಜಗಜಾಂತರ ವ್ಯತ್ಯಾಸ ಇದೆ. ಸಮಾಜವಾದಿ ದೇಶದಲ್ಲೇ ಒಂದು ರೀತಿ ಇದೆ. ಬಂಡವಾಳಶಾಹಿಯಾದ ನಮ್ಮ ದೇಶದಲ್ಲೇ ಒಂದು ರೀತಿ ಇದೆ. ಏತಕ್ಕೆ ಹೀಗಾಗಿದೆ ? ಸ್ವಾಮಿ, ನಾವು ಮೊನ್ನೆ ಮಾಸ್ಕೋದಲ್ಲಿ ಕಾರುಗಳನ್ನು ಜಾಸ್ತಿ ನೋಡುವುದಿಲ್ಲ. ಮಾನ್ಯ ಅಧ್ಯಕ್ಷರೆ, ತಾವೂ ಕೂಡ ಪೀಸ್ ಕಾನ್‌ಫರೆನ್ಸ್‌ಗೆ ಮಾಸ್ಕೋಗೆ ಬಂದಿದ್ದಿರಿ. ಅಲ್ಲಿ ಬಸ್ಸುಗಳು ಓಡಾಡುತ್ತಿವೆ, ಅಂಡರ್‌ಗ್ರೌಂಡ್ ರೈಲ್ಸ್ ಇವೆ, ಆದರೆ ಅವರು ಕಾರುಗಳನ್ನು ಜಾಸ್ತಿ ಇಟ್ಟುಕೊಂಡಿಲ್ಲ. ನಮಗಿಂತಲೂ ಕೊಂಡು ಕೊಳ್ಳುವ ಶಕ್ತಿ ಅವರಲ್ಲಿ ಜಾಸ್ತಿ ಇದೆ. ಅವರು ಕಳೆದ ೨೫ ವರ್ಷಗಳಿಂದ ಬೆಲೆಗಳನ್ನು ಜಾಸ್ತಿ ಮಾಡಿಲ್ಲ. ಕಾರುಗಳ ಮ್ಯಾನುಫ್ಯಾಕ್ಚರ್‌ನ್ನು ಅವರು ಕಡಿಮೆ ಮಾಡಿದ್ದಾರೆ. ಏಕೆಂದರೆ ಇದರಿಂದ ಬೆಲೆಗಳು ಜಾಸ್ತಿಯಾಗುತ್ತವೆ. ಟ್ರಾಫಿಕ್ ಪ್ರಾಬ್ಲಂ ಜಾಸ್ತಿಯಾಗುತ್ತದೆ, ಪೊಲ್ಯೂಷನ್ ಪ್ರಾಬ್ಲಂ ಬರುತ್ತದೆ, ಇನ್ನೂ ಅನೇಕ ರೀತಿಯ ಪ್ರಾಬ್ಲಂಗಳು ಬರುತ್ತೇವೆಂದು ತಿಳಿದು ಕೊಂಡು ಅವರು ಕಾರುಗಳ ತಯಾರಿಕೆಯನ್ನು ಮಾಡುವುದೇ ಬೇಡವೆಂದು ತೀರ್ಮಾನ ಮಾಡಿದ್ದಾರೆ.

ಮಾಸ್ಕೋ ಸೋವಿಯತ್ ಮೆಟ್ರೋಪಾಲಿನ್ ಸಿಟಿಗಳು ಅಲ್ಲಿ ಹೋಗಿದ್ದಾಗ, ಅಲ್ಲಿಯ ಚೇರ್‌ಮೆನ್‌ರವರ ಹತ್ತಿರ ಮಾತನಾಡಿದಾಗ ಅವರು ಈ ರೀತಿ ಹೇಳಿದರು, ಹಾಗೆಯೇ ಇನ್ನೊಬ್ಬ ಆಟೊಮೊಬೈಲ್ ಇಂಜಿನೀಯರ್‌ರವರನ್ನು ಕೇಳಿದಾಗ ಅವರೂ ಕೂಡ ಅದನ್ನೇ ಹೇಳಿದರು, ಒಟ್ಟಾರೆ ಇಬ್ಬರಲ್ಲೂ ಒಂದೇ ಅಭಿಪ್ರಾಯ ಇಟ್ಟುಕೊಂಡಿರುತ್ತಾರೆ. ಜೀವನ ಮೆಚ್ಚ ಹೆಚ್ಚುತ್ತಾ ಬಂದರೂ ಕೂಡ ಪರವಾಗಿಲ್ಲ ಹೆಚ್ಚು ಬಸ್ಸುಗಳನ್ನು ಕೊಡುತ್ತೇವೆ, ಹೆಚ್ಚು ಅಂಡರ್‌ಗ್ರೌಂಡ್ಸ್‌ಗಳನ್ನು ಕೊಡುತ್ತೇವೆ, ಎಲೆಕ್ಟ್ರಿಕ್ ಟ್ರೈನ್‌ಗಳನ್ನು ಕೊಡುತ್ತೇವೆಂದು ಅವರು ಹೇಳುತ್ತಾರೆ. ಆದರೆ ಇಲ್ಲಿಯೆ ಬೇರೆ. ಚೈನಾ ದೇಶದಲ್ಲಿ ಇದೇ ಪರಿಸ್ಥಿತಿ ಏತಕ್ಕೆ ಇಲ್ಲ ? ಮಾನ್ಯ ಜೆ. ಎಚ್. ಪಟೇಲರೂ ಕೂಡ ಚೈನಾ ದೇಶಕ್ಕೆ ಹೋಗಿ ನೋಡಿ ಕೊಂಡು ಬಂದಿರುತ್ತಾರೆ. ಮಂಕ್ಕಾಲು ಭಾಗ ಜನರು ಸೈಕಲ್ ಮತ್ತು ಬಸ್ಸುಗಳಲ್ಲಿ ಓಡಾಡುತ್ತಾರೆ. ಅಧಿಕಾರಿಗಳೂ ಕೂಡ ಸೈಕಲ್ ಮತ್ತು ಬಸ್ಸುಗಳಲ್ಲಿ ಹೋಗುತ್ತಾರೆ. ಅಲ್ಲಿ ಕಾರುಗಳನ್ನು ಉಪಯೋಗಿಸುವುದಿಲ್ಲ. ಅಲ್ಲಿಯ ಪರಿಸ್ಥಿತಿಯೇ ಬೇರೆ, ಇಲ್ಲಿಯ ಪರಿಸ್ಥಿತಿಯೇ ಬೇರೆ ಅಲ್ಲಿಯ ವಿಚಾರ ಧಾರೆ, ಯೋಚನೆ, ಹೋಗುವ ದಾರಿ, ಆರ್ಥಿಕವಾಗಿ ಅಭಿವೃದ್ಧಿಯಾಗಲು ಯಾವ ರೀತಿ ಹೋಗಬೇಕು ಎನ್ನುವ ಭೋರಣೆಯೇ ಬೇರೆ. ನಮಗೂ ಅವರಿಗೂ ಬಹಳಷ್ಟು ವ್ಯತ್ಯಾಸವಿದೆ. ಮೂಲಭೂತವಾಗಿ ವ್ಯತ್ಯಾಸವಿರುವುದರಿಂದಲೇ ಅಲ್ಲಿ ಈಪತ್ತಿನ ದಿವಸ ಪೆಟ್ರೋಲ್ ೨–೧೫ ಪೈಸೆಗೆ ದೊರೆಯಂತ್ತಿದೆ. ಇಲ್ಲಿ ೮–೧೦ ರೂಪಾಯಿಗಳ ಬೆಲೆ ಇದೆ. ಆ ಸಿಸ್ಟಮ್ ಇಲ್ಲಿಯೂ ಬಂದರೆ ಎಲ್ಲಾ ಸರಿಹೋಗುತ್ತದೆ. ನಮ್ಮಲ್ಲಿರುವ ಸಿಸ್ಟಮ್ ಇರುವ ತನಕ ಇದು ಸರಿಹೋಗುವುದಿಲ್ಲವೆನ್ನುವುದು ನನ್ನ ಅಭಿಪ್ರಾಯಂ.

ಶ್ರೀ ಜೆ. ಎಚ್. ಪಟೇಲ್.— ಮಾನ್ಯ ಎಂ. ಎಸ್. ಕೃಷ್ಣನ್‌ರವರು ಚೈನಾದ ಉದಾಹರಣೆಯನ್ನು ಕೊಟ್ಟು ಹೇಳಿದರು. ಚೈನಾದ ಉದಾಹರಣೆ ಒಂದು ಉತ್ತಮವಾದ ಉದಾಹರಣೆ, ನಾನು ಓದಿದ್ದೇನೆ ಅಲ್ಲಿಯ ರಾಷ್ಟ್ರೀಯ ವಾಹನ ಬೈಸಿಕಲ್. ಶೇಕಡ ೯೦ ಭಾಗ ಜನರು ಬೈಸಿಕಲ್‌ನೇ ಉಪಯೋಗಿಸುತ್ತಾರೆ. ಏತಕ್ಕೆ ಉಪಯೋಗಿಸುತ್ತಾರೆಂದರೆ ಅದಕ್ಕೆ ಇಂಧನ ಬೇಕಾಗಿಲ್ಲ. ಇಂಧನವನ್ನು ಬಳಸುವುದರಿಂದ ಮಾಲಿನ್ಯವಾಗುವುದಿಲ್ಲ. ಮತ್ತೆ ಮೂರನೆಯದಾಗಿ ಸೈಕಲ್ಲನ್ನು ಉಪಯೋಗಿಸುವುದರಿಂದ ಉಪಯೋಗಿಸತಕ್ಕಂಥ ನಾಗರೀಕರ ಆರೋಗ್ಯವೂ ಸುಧಾರಣೆಯಾಗುತ್ತದೆ ಈ ಕಾರಣಗಳಿಂದಲೇ ಚೈನಾ ದೇಶದವರು ಸೈಕಲ್ಲನ್ನು ಉಪಯೋಗಿಸುವುದು. ಅನಂತರ ತಮ್ಮಲ್ಲಿರುವ ಆಯಿಲ್ ರಿಸರ್ವೇಷನ್ ಏನು ಇದೆ ಅದನ್ನು ಪೂರ್ತಿಯಾಗಿ ಟ್ಯಾಪ್ ಮಾಡಲಿಕ್ಕೆ ಹೋಗಿಲ್ಲ. ಅವರ ಲೆಕ್ಕಾಚಾರವೇ ಬೇರೆ. ೫೦ ವರ್ಷಗಳಾದ ನಂತರ ಜಗತ್ತಿನಲ್ಲಿರುವ ಬೇರೆ ಬೇರೆ ರಾಷ್ಟ್ರಗಳು ಎಲ್ಲಾ ತಮ್ಮ ರಿಸೋರ್ಸಸ್ ಎಕ್ಸಾಸ್ಟೆಡ್ ಮಾಡಿದ ಮೇಲೆ ನಮ್ಮಲ್ಲಿ ಅದನ್ನು ಉಪಯೋಗಿಸಬೇಕು ಎನ್ನುವ ದೂರದೃಷ್ಟಿಯಿಂದ ಈ ರೀತಿಯ ಶಿಸ್ತಿನ ಆಡಳಿತವನ್ನು ಅವರು ನಡೆಸುತ್ತಿದ್ದಾರೆ. ಅದಕ್ಕೆ ಕಾರಣವೇ ಬೇರೆ ಇದೆ. ಮಾನ್ಯ ಕೃಷ್ಣನ್‌ರವರಿಗೆ ನಾನು ಇದನ್ನು ಬಿಚ್ಚಿ ಹೇಳಬೇಕಾಗಿಲ್ಲ. ಆ ವ್ಯವಸ್ಥೆಯೇ ಬೇರೆ. ಈ ವ್ಯವಸ್ಥೆಯೇ ಬೇರೆ. ಆ ವ್ಯವಸ್ಥೆಯಲ್ಲಿ ನಾವು ಇಲ್ಲಿ ಒಂದು ಪೀಸ್‌ಮಿಲ್ ಆಗಿ ಅಡಾಪ್ಟ್ ಮಾಡಲಿಕ್ಕೆ ಆಗುವುದಿಲ್ಲ. ಆದ್ದರಿಂದ ಮಾನ್ಯ ಸದಸ್ಯರನ್ನು ವಿನಂತಿಸಿಕೊಳ್ಳುವುದೇನೆಂದರೆ ಕೇಂದ್ರ ಸರ್ಕಾರದ ಬೆಲೆ ಏರಿಸತಕ್ಕಂಥ ಧೋರಣೆ ಏನು ಇದೆ, ಅದು ನಿಲ್ಲಬೇಕು ರೆಸಲ್ಯೂಷನ್‌ನ ಎಳಿಕೆಸಿ ಏನು ಇದೆ ಆ ಬಗ್ಗೆ ನಮ್ಮದೇನೂ ಅಭ್ಯಂತರವಿಲ್ಲ. ಏತಕ್ಕೆಂದರೆ ಯಾವಾಗ ಅಂದರೆ ಆವಾಗ ಬೆಲೆ ಏರಿಸತಕ್ಕಂಥದ್ದನ್ನು ನಿಲ್ಲಿಸಿ ಎನ್ನುವುದು. ಈ ಹೌಸ್‌ನ ರೆಸಲ್ಯೂಷನ್ ಬಹುಶಃ ಕಾಂಗ್ರೆಸ್ ಪಕ್ಷದವರು ಇದ್ದಿದ್ದರೆ ಅದಕ್ಕೆ ಅವರು ಸಪೋರ್ಟ್ ಮಾಡುತ್ತಿದ್ದರೋ ಅಪೋಸ್ ಮಾಡುತ್ತಿದ್ದರೆ ಗೊತ್ತಿಲ್ಲ. ಆದರೆ ಸರ್ವೇಸಾಮಾನ್ಯವಾಗಿ ಭಾರತದ ಯಾವುದೇ ಪ್ರಜೆಯಾಗಿರತಕ್ಕಂಥವನು ಈ ವಿಧಾನ ಸರಿಯಲ್ಲ ಎನ್ನುವುದನ್ನು ಒಪ್ಪುತ್ತಾನೆ. ಇದಕ್ಕೆ ಎರಡು ವಿಧಾನವಿದೆ. ಒಂದು ಸಿದ್ಧಾಂಥದ ನಿರ್ಣಯ ಏನು ಇದೆ ಇದರಿಂದ ಕೇಂದ್ರ ಸರ್ಕಾರದ ಮೇಲೆ ತಕ್ಷಣ ಆಗತಕ್ಕಂಥ ಪರಿಣಾಮ ಬರೀ ತಾತ್ವಿಕವಾಗಿ ಆಗುತ್ತದೆ. ವಾಸ್ತವಿಕವಾಗಿ ರಿಲೀಫ್ ಸಿಗುತ್ತದೆನ್ನುವುದು ಡೌಟ್.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಹೇಳಿದ ಮಾತು ಬಹಳ ಒಳ್ಳೆಯದು. ಚೈನಾದ ಬಗ್ಗೆ ಹೇಳಿದರು, ಅಷ್ಟೇ ಅಲ್ಲ ಅಲ್ಲಿಯ ವ್ಯವಸ್ಥೆಯೇ ಬೇರೆ, ಇಲ್ಲಿಯ ವ್ಯವಸ್ಥೆಯೇ ಬೇರೆ ಎಂದು ಹೇಳಿದರು. ತಮಗೆ ಗೊತ್ತಿರುವಂತೆ ಇಲ್ಲಿಯ ವ್ಯವಸ್ಥೆ ತಿಳಿದಿದೆ. ಆದರೆ ಆ ವ್ಯವಸ್ಥೆಯ ರೀತಿಯಲ್ಲಿ ಇಲ್ಲೂ ಮಾಡಬೇಕು ಎನ್ನುವ ಅಭಿಪ್ರಾಯಕ್ಕೆ ಬರಬೇಕು. ಆ ದಾರಿಯಲ್ಲಿ ಜನರನ್ನು ಸಂಘಟನೆ ಮಾಡುವ ಅಭಿಪ್ರಾಯಕ್ಕೆ ಬರಬೇಕು. ಆ ದಾರಿಯಲ್ಲಿ ಈ ದೇಶದ ವ್ಯವಸ್ಥೆಯಲ್ಲಿ ಬದಲಾವಣೆ ಮಾಡುವ ಕೆಲಸ ಮಾಡಿದರೆ ಅದರ ಬಗ್ಗೆ ನಮಗೂ ಒಪ್ಪಿಗೆ ಇದೆ. ನಮಗಂತೂ ಆ

ಅಭಿಪ್ರಾಯವಿದೆ, ಅದು ತಕ್ಷಣ ಆಗುವುದಿಲ್ಲವೆಂದು ಹೇಳಬಹುದು. ಅದಕ್ಕೆ ಚಳುವಳಿ, ಹೋರಾಟ ಮಾಡಬೇಕು, ಅದಕ್ಕೆ ಕ್ರಾಂತಿ ಎಂದು ಹೇಳುತ್ತೇನೆ. ಕ್ರಾಂತಿ ಎಂದರೆ ರಕ್ತಪಾತವಲ್ಲ, ಕ್ರಾಂತಿ ಎಂದರೆ ಬದಲಾವಣೆ. ಯಾವ ಸಿದ್ಧಾಂತದ ಮೇಲೆ ಸಮಾಜವಾದವನ್ನು ತರಬೇಕು ಎಂದು ಇರುತ್ತೀರೋ ಆ ಸಿದ್ಧಾಂತ ನಮ್ಮ ದೇಶದ ಪರಿಸ್ಥಿತಿಗೆ ಅನುಗುಣವಾಗಿ, ಆಚಾರ ವಿಚಾರಗಳಿಗೆ ಅನುಗುಣವಾಗಿ, ಸಂಸ್ಕೃತಿಗೆ ಅನುಗುಣವಾಗಿರಬೇಕು ಎನ್ನುವುದೇ ನಮ್ಮ ವಿಚಾರ.

ಅದನ್ನು ನೀವು ನಾವು ಸೇರಿ ತರೋಣ. ಅದು ಬಹಳ ಒಳ್ಳೆಯ ಕೆಲಸ ಅನ್ನಿಸಂತ್ತದೆ. ಎರಡನೇ ಮಾತಿನ ಬಗ್ಗೆ ಕೊನೆಯಲ್ಲಿ ಹೇಳುತ್ತೇನೆ, ನೀವು ಹೇಳಿದ್ದೂ ಇದೆ. ಅದಕ್ಕೆ ಅರ್ಥವಿಲ್ಲವೆಂದು ಹೇಳುತ್ತಿಲ್ಲ. ಕಡೆಯಲ್ಲಿ ಅದಕ್ಕೆ ಬರುತ್ತೇನೆ. ಇವತ್ತು ಏತಕ್ಕೆ ಇಷ್ಟರವರೆಗೆ ವಿಶ್ಲೇಷಣೆ ಮಾಡಿದೆ ಎಂದರೆ ಯಾರೂ ಕೂಡ ಅಲ್ಲ ಗಳೆಯುವ ಪರಿಸ್ಥಿತಿ ಇರಕೂಡದು ಮತ್ತು ಕೇಂದ್ರ ಸರ್ಕಾರದ ವಾದವನ್ನು ನಿರಾಕರಿಸಬೇಕು ಎಂದು ಕೇಂದ್ರ ಸರ್ಕಾರದ ವಾದ ಸರಿಯಾದುದಲ್ಲ. ಕನ್‌ಸಮ್ಪ್‌ಷನ್ ಕಡಿಮೆ ಮಾಡಬೇಕು. ಅದಕ್ಕೋಸ್ಕರ ಮಾಡಿದ್ದೇವೆಂದು ಹೇಳುತ್ತಾರೆ. ಆದರೆ ಅದು ಜಾಸ್ತಿ ಯಾಗುವುದಕ್ಕೆ ಅವರೇ ಅವಕಾಶ ಮಾಡಿಕೊಡುತ್ತಾರೆ ಕನ್‌ಸಮಷನ್ ಕಡಿಮೆ ಮಾಡುವುದಾದರೆ ಮಾರುತಿ ಕಾರುಗಳನ್ನು ಏತಕ್ಕೆ ಜಾಸ್ತಿ ಮಾಡಿದರು ?

ಶ್ರೀ ಜೆ.ಹೆಚ್. ಪಟೇಲ್.—ಕನ್‌ಸಮ್ಪ್‌ಷನ್ ಕಡಿಮೆ ಆಗುವುದಿಲ್ಲ. It is very fallacious. Out of the total consumption of petrol in thecountry, 82 to 85% is used only by Government.

(ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಶ್ರೀ ಎಂ.ಎಸ್. ಕೃಷ್ಣನ್— ಅದು ಒಂದು. ಎರಡನೆಯದಾಗಿ ದ್ವಿಚಕ್ರ ವಾಹನಗಳನ್ನು ಬಿಟ್ಟು Contessa, ಮಾರುತಿ ಕಾರುಗಳನ್ನು ಸರ್ಕಾರದವರೇ ಎಲ್ಲವನ್ನು ಉಪಯೋಗಿಸುತ್ತಾರೆಂದು ಅಲ್ಲ. ಸಾಮಾನ್ಯವಾಗಿ ಜನಸಾಮಾನ್ಯರೂ ಉಪಯೋಗಿಸುತ್ತಾರೆ. ಒಬ್ಬೊಬ್ಬರ ಮನೆಗಳಲ್ಲಿ ೨-೩ ಸ್ಕೂಟರ್‌ಗಳು, ಲೂನಗಳು, ೪-೫ ಕಾರುಗಳು ಇರುತ್ತವೆ. ಇದರ ಪರ್ಸೆಂಟೇಜ್ ಕಡಿಮೆ ಇರಬಹುದು. ಒಂದು ಪರ್ಸೆಂಟ್ ಇರಬಹುದು. ಆದರೆ what should be your approach to this problem ? Ifyou really what to reduce the consumption at the level of the government, there also you have to take strict notice. At the level of people also it should be done. ಆದ್ದರಿಂದ ಕಾರುಗಳನ್ನು ಮ್ಯಾನು ಫ್ಯಾಕ್ಚರ್ ಮಾಡುವುದಕ್ಕೆ ಅವಕಾಶ ಕೊಡಬೇಡಿ ಎಂದು ಹೇಳುತ್ತೇನೆ ಅದನ್ನು ಮಾಡುವುದಕ್ಕೆ ನೀವು ಆಲೋಚನೆ ಮಾಡಿಲ್ಲ. ಹೊಸ ಕೊಲ್ಯಾಬರೇಷನ್ ಅಗ್ರಿಮೆಂಟಿಗೆ ಅವಕಾಶ ಮಾಡಿಕೊಡುತ್ತಿದ್ದೀರಿ. ಜಪಾನಿನ ಜೊತೆಯಲ್ಲಿ ಸಿಕ್ಕಾಪಟ್ಟೆ ಕೊಲಾಬರೇಷನ್ ಅಗ್ರಿಮೆಂಟ್ ಆಗಿದೆ. ಅದು ಬಹಳ ರೆಪ್ಯು ಟೇಟಿವ್ ಟೆಕ್ನಾಲಜಿ, ಅದು ಬಂದರೆ ನಮ್ಮ ದೇಶ ವಂದಾನುವರಿಯುವುದಿಲ್ಲ. We cannot stand on our own legs. They give some kit The entire kit has to be imported. We cannot manufacture for want of technical know-how. They are also not prepared to give technical know-how. ಆ ತರಹ ಜಪಾನ್‌ನವರು ಮಾಡುತ್ತಿದ್ದಾರೆ. ಅವರು ಅಮೆರಿಕಾವನ್ನು ಎದುರಿಸುತ್ತಿದ್ದಾರೆ. ಅದಕ್ಕೆ ನಮ್ಮ ಏಕೆ ಒಪ್ಪಿಕೊಳ್ಳಬೇಕು ? ಒಪ್ಪಿಕೊಳ್ಳತಕ್ಕ ಪರಿಸ್ಥಿತಿಯನ್ನು ಕೇಂದ್ರ ಸರ್ಕಾರದವರು ಏಕೆ ಮಾಡಬೇಕು? ಅದೇ ನಮ್ಮ ಪ್ರಶ್ನೆ. ಒಂದಕ್ಕೊಂದು ಲಿಂಕ್ ಇರುವುದರಿಂದ ಇಕನಾಮಿಕ್ ಪಾಲಿಸಿ, ಪೊಲಿಟಿಕಲ್ ಪಾಲಿಸಿಗೂ ಲಿಂಕ್ ಇದೆ ಎಂಬುದು ನಿಜ. ಆದರಿಂದಲೇ ಪ್ರೆಸ್ ಜಾಸ್ತಿಯಾಗಿರುವುದು. ಇದು ಸರಿಯಾದುದಲ್ಲ. ಈ ನೀತಿಯನ್ನು ಪೂರ್ತಿ ಬದಲಾವಣೆ ಮಾಡಿಕೊಳ್ಳಬೇಕಾಗಿದೆ. ಇದು ನೇರವಾಗಿ ಯಾರ ಮೇಲೆ ಬಿದ್ದಿದೆ ಎಂದರೆ ಸರ್ಕಾರ ಮತ್ತಿತರ ವಿಭಾಗಗಳ ಮೇಲೆ ಮಾತ್ರವಲ್ಲ ಜನಸಾಮಾನ್ಯರ ಮೇಲೆ ಬಹಳ ದೊಡ್ಡದಾಗಿ ಬೆಲೆ ಏರಿಕೆಯ ಹೊರೆ ಬಿದ್ದಿದೆ. ಜನಸಾಮಾನ್ಯರ ಮೇಲೆ ಬಿದ್ದಾಗ ಎಲ್ಲವನ್ನೂ ಅವರೇ ಹೊತ್ತುಕೊಳ್ಳಬೇಕು. ಸೇಲ್ಸ್ ಟ್ಯಾಕ್ಸ್, ಎಕ್ಸೈಜ್ ಟ್ಯಾಕ್ಸ್ ಮತ್ತಿತರ ಎಲ್ಲಾ ತೆರಿಗೆಗಳನ್ನು ಕೊಡತಕ್ಕವನು ಅವನೇ.

ಶ್ರೀ ಜೆ.ಹೆಚ್. ಪಟೀಲ್.—ಈ ನಿರ್ಣಯವನ್ನು ಇವತ್ತೇ ಮಂಗಿಸುವುದೇ ಅಥವಾ ಮುಂದು ವರಿಸುವುದೇ ಹೇಗೆ ?

ಅಧ್ಯಕ್ಷರು.—೨ ಗಂಟೆಯವರೆಗೆ ಕಂಳಿತು ಮಂಗಿಸೋಣವೇ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಕೃಷ್ಣನ್‌ರವರು ಚೆನ್ನಾಗಿ ಮಾತನಾಡಿದ್ದಾರೆ. ಅವರ ಮಾತುಗಳು ಬೋಧಪ್ರದವಾಗಿವೆ, ತುಂಬಾ ತರಬೇತಿ ತೆಗೆದುಕೊಂಡು ಅಂಕಿ ಅಂಶಗಳನ್ನು ಇಟ್ಟು ಕೊಂಡು ಚನ್ನಾಗಿ ಭಾಷಣ ಮಾಡುತ್ತಿದ್ದಾರೆ. ಇನ್ನೂ ಈ ವಿಷಯದ ಮೇಲೆ ಬೆಳಕು ಚೆಲ್ಲುತಕ್ಕ ಅವಕಾಶವನ್ನು ಕೃಷ್ಣನ್‌ರವರಿಗೆ ಕೊಡಬೇಕೆಂಬ್ಲುದ್ದೇಶದಿಂದ ಅವರು ತಮ್ಮ ವಾದವನ್ನು ಮುಂದಿನ ಶುಕ್ರವಾರ ಮುಂದುವರಿಸಬೇಕೆಂದು ನನವಿ ಮಾಡಿಕೊಳ್ಳುತ್ತಾ, ಈ ದಿನದ ಕಾರ್ಯಕಲಾಪಗಳನ್ನು ಇಲ್ಲಿಗೆ ತಾವುನಿಲ್ಲಿಸಬೇಕೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಪ್ರಕಟಣೆ

ಅಧ್ಯಕ್ಷರು.—ದಿನಾಂಕ ೨೮-೧-೮೮ ರಂದು ಬೆಳಿಗ್ಗೆ ೧೧-೩೦ ಗಂಟೆಗೆ ದಾವಣಗೆರೆಯಲ್ಲಿ ಬಂಧಿತರಾದ ವಿಧಾನಸಭಾ ಸದಸ್ಯರಾದ ಶ್ರೀ ಪಂಪಾಪತಿ ಅವರನ್ನು ದಿನಾಂಕ ೧೦-೨-೮೮ ರವರೆಗೆ ನ್ಯಾಯಾಂಗ ಕಸ್ಟಡಿಗೆ ಒಪ್ಪಿಸಲಾಗಿದೆ ಎಂದು ಬಳ್ಳಾರಿ ಕೇಂದ್ರ ಬಂದೀಖಾನೆಯ ಪೊಲೀಸ್ ಸೂಪರಿಂಟಿಂಡೆಂಟ್ ಅವರಿಂದ ನನಗೆ ಸಂದೇಶ ಬಂದಿದೆ. ಈಗ ಸಭೆಯನ್ನು ಮುಂದೂಡಿ ಮುಂತೆ ಸೋಮವಾರ ಬೆಳಿಗ್ಗೆ ೧೧ ಗಂಟೆಗೆ ಪುನಃ ಸೇರುವುದು.

ಸದನವು ಮಧ್ಯಾಹ್ನ ೧-೩೦ಕ್ಕೆ ಮುಂಕ್ತಾಯವಾಗಿ ೧ನೇ ಫೆಬ್ರುವರಿ ೧೯೮೮ರ ಸೋಮವಾರದಂದು ಬೆಳ್ಳಿಗೆ ೧೧ ಗಂಟೆಗೆ ಸೇರುವುದಾಗಿ ನಿಶ್ಚಯಿಸಲಾಯಿತು,